ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallammanudi@gmail.com E-paper: www.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy | RNI NO:KARKAN/2011/48371

VOLUME-13 ಸಂಪುಟ:13 | ISSUE- ಸಂಚಿಕೆ: 10 | PAGE- ಪುಟ 8 | ಮಂಗಳವಾರ 11.02.2025 | RS.ಬೆಲೆ 2/-

# ಅಧಿಕೃತ 'ನೋಟಿಸ್' ಬಂದಿಲ್ಲ: ಯತ್ನಾಳ್



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಕಜ.10: ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಅವರ ವಿರುದ್ಧ ಬಹಿರಂಗವಾಗಿ ವಾಗ್ದಾಳಿ ನಡೆಸುತ್ತಿರುವ ಬಿಜೆಪಿ ಹಿರಿಯ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರಿಗೆ ಬಿಜೆಪಿ ಕೇಂದ್ರ ಶಿಸ್ತು ಸಮಿತಿ ಸೋಮವಾರ ಮತ್ತೆ ನೋಟಿಸ್ ನೀಡಿದೆ ಎಂದು ವರದಿಯಾಗಿದೆ.

ನೋಟಿಸ್‌ಗೆ 72 ಗಂಟೆಗಳಲ್ಲೇ ಉತ್ತರಿಸುವಂತೆ ಯತ್ನಾಳ್ ಅವರಿಗೆ ಬಿಜೆಪಿ ಹೈಕಮಾಂಡ್ ಸೂಚಿಸಿದ್ದು, ಒಂದು ವೇಳೆ ನಿಗದಿತ ಸಮಯದಲ್ಲಿ ಉತ್ತರ ನೀಡದಿದ್ದರೆ ಮುಂದಿನ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಲಾಗಿದೆ ಎನ್ನಲಾಗಿದೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರತಿಕ್ರಿಯಿಸಿರುವ ಯತ್ನಾಳ್, ನನಗೆ ಅಧಿಕೃತವಾಗಿ ಯಾವುದೇ ನೋಟೀಸು ಬಂದಿರುವುದಿಲ್ಲ. ನೋಟೀಸು ಬಂದಮೇಲೆ ಕೆಲವ್ಯಕ್ತಿಗಳ ಏಕಸ್ವಾಮ್ಯತೆ, ಏಕಪಕ್ಷೀಯ ನಿರ್ಧಾರಗಳು, ಉತ್ತರ ಕರ್ನಾಟಕದ ಕಡೆಗಣನೆ, ಕುಟುಂಬ ರಾಜಕಾರಣ, ಕಾಂಗ್ರೆಸ್ ಪಕ್ಷದ ವೈಫಲ್ಯಗಳನ್ನು ರಾಜ್ಯದ ಜನತೆಗೆ ವಿವರಿಸಲು ವಿಫಲವಾಗಿರುವ ಪಕ್ಷದ ಧೋರಣೆ, ಹೊಂದಾಣಿಕೆ ರಾಜಕೀಯ ಸೇರಿದಂತೆ ಸ್ವಜನಪಕ್ಷಪಾತದ ಬಗ್ಗೆ ವಿವರವಾಗಿ ಲಿಖಿತ ರೂಪದಲ್ಲಿ ಉತ್ತರ ನೀಡುತ್ತೇನೆ ಎಂದಿದ್ದಾರೆ. ಈ ಹಿಂದೆಯೂ ಯತ್ನಾಳ್ ಅವರಿಗೆ ಬಿಜೆಪಿ ಕೇಂದ್ರ ಶಿಸ್ತು ಸಮಿತಿ ನೋಟಿಸ್ ನೀಡಿತ್ತು ಮತ್ತೆ ಅವರು ಉತ್ತರ ಸಹ ನೀಡಿದ್ದರು. ಆದರೆ ವಿಜಯೇಂದ್ರ ವಿರುದ್ಧ ನಿರಂತರವಾಗಿ ಹೇಳಿಕೆ ನೀಡುವುದನ್ನು ಮಾತ್ರ ನಿಲ್ಲಿಸಿಲ್ಲ. ಹೀಗಾಗಿ ಇಂದು ಮತ್ತೊಮ್ಮೆ ಯತ್ನಾಳ್ ಅವರಿಗೆ ಕಾರಣ ಕೇಳಿ ಶೋಕಾಸ್ ನೋಟಿಸ್ ನೀಡಲಾಗಿದೆ. ದೆಹಲಿಯಲ್ಲಿದ್ದ ಯತ್ನಾಳ್ ಅವರು ಈಗ ಹೈದರಾಬಾದ್ ನತ್ತ ಪ್ರಯಾಣ ಬೆಳಸಿದ್ದು, ಬಿಜೆಪಿ ಶಿಸ್ತು ಸಮಿತಿ ನೀಡಿದ ನೋಟಿಸ್ ಇನ್ನೂ ಅವರ ಕೈಸೇರಿಲ್ಲ ಎಂದು ತಿಳಿದುಬಂದಿದೆ

## ಪುನಾರಂಭವಾಗದ ಬೀದರ್-ಬೆಂಗಳೂರು ವಿಮಾನ ಹಾರಾಟ..? ನನಸಾಗದ ಕನಸು




ಬೀದರ. ಫೆ. 10 : ಸ್ಥಗಿತಗೊಂಡ ಬೀದರ್-ಬೆಂಗಳೂರು ಮಧ್ಯೆ ನಾಗರಿಕ ವಿಮಾನಯಾನ ಸೇವೆ ಪುನರಾರಂಭಗೊಳ್ಳುವ ಯಾವುದೇ ಲಕ್ಷಣಗಳು ಕಾಣುತ್ತಿಲ್ಲ. ಅಪಾರ ಕನಸು ಇಟ್ಟುಕೊಂಡಿದ್ದ ಸಾರ್ವಜನಿಕರ ಮತ್ತು ಪ್ರಯಾಣಿಕರಲ್ಲಿ ಈಗ ಬೀದರ್ ವಿಮಾನ ನಿಲ್ದಾಣ ಮುಚ್ಚುವ ಆತಂಕ ಸೃಷ್ಟಿಸಿದೆ. ರಾಜ್ಯದ ವಿಜಯಪುರ ವಿಮಾನ ನಿಲ್ದಾಣ ಲೋಕಾರ್ಪಣೆಗೆ ತಯಾರಿ ನಡೆಯುತ್ತಿದೆ.

ಹಾಸನದಲ್ಲಿ ವಿಮಾನ ನಿಲ್ದಾಣ ಹಾಗೂ ಬೆಂಗಳೂರಿನಲ್ಲಿ ಎರಡನೇ ವಿಮಾನ ನಿಲ್ದಾಣ ಎಲ್ಲಿ ನಿರ್ಮಿಸಬೇಕೆಂಬ ಬಗ್ಗೆ ಚರ್ಚೆಗಳು ಜೋರಾಗಿ ನಡೆಯುತ್ತಿವೆ. ಆದರೆ ಎಲ್ಲಾ ತಯಾರಿಯಲ್ಲಿದ್ದ ಬೀದರ್ ವಿಮಾನ ನಿಲ್ದಾಣದ ಬಾಗಿಲು ಮುಚ್ಚುವ ಹಂತಕ್ಕೆ ಬಂದಿರುವುದು ವಿಪರ್ಯಾಸವಾಗಿದೆ.

2023ರ ಡಿಸೆಂಬರ್‌ನಲ್ಲಿ ಸ್ಥಗಿತಗೊಂಡ ವಿಮಾನಯಾನ ಇನ್ನೂ ಪುನರಾರಂಭವಾಗಿಲ್ಲ. ಸದ್ಯ ಈ ನಿಲ್ದಾಣಕ್ಕೆ ಯಾವುದೇ ವಿಮಾನ ಬರುತ್ತಿಲ್ಲ. ಪ್ರಯಾಣಿಕರ ಕೊರತೆ, ವಿಮಾನಗಳ ಸಂಪರ್ಕವಿಲ್ಲ, ಆರ್ಥಿಕ ನಷ್ಟ ಮುಂತಾದ ಕಾರಣಕ್ಕೆ ಈ ನಿಲ್ದಾಣವು ಮುಚ್ಚುವ ಹಂತಕ್ಕೆ ತಲುಪಿದೆ. ವಿಮಾನ ಹಾರಾಟಕ್ಕೆ ಸಜ್ಜಾಗಿದ್ದ ಸ್ಟಾರ್ ಏರ್‌ಲೈನ್ಸ್ ಡಿಸೆಂಬರ್‌ನಲ್ಲೇ ಸೇವೆ ಆರಂಭಿಸುವ ಭರವಸೆ ನೀಡಿತ್ತು. ನಂತರ ಜ.26ಕ್ಕೆ ಮುಂದೂಡಿತ್ತು. ಆದರೆ ಇನ್ನೂ ವಿಮಾನ ಸೇವೆ ಆರಂಭಗೊಳ್ಳದಿರುವುದು ನಾನಾ ಸಂಶಯಕ್ಕೆ ಎಡೆ ಮಾಡಿಕೊಟ್ಟಿದೆ.

ಬೀದರ್‌ನಿಂದ ಬೆಂಗಳೂರು, ದೆಹಲಿ ಮುಂತಾದ ನಗರಗಳಿಗೆ ಹಾರಾಟ ನಡೆಸಬೇಕು ಎಂಬ ಜನರ ಕನಸು ನನಸಾಗುತ್ತಿಲ್ಲ. 2020ರ ಫೆಬ್ರವರಿ 7ರಂದು ಅಂದಿನ ಸಿಎಂ ಬಿ.ಎಸ್. ಯಡಿಯೂರಪ್ಪ ಬೀದರ್ ವಿಮಾನ ನಿಲ್ದಾಣ

(2ನೇ ಪುಟ ನೋಡಿ)

## ವಚನ ವಿಜಯೋತ್ಸವ ಉದ್ಘಾಟಿಸಿದ ವಿಧಾನಸಭಾಧ್ಯಕ್ಷ ಯುಟಿ ಖಾದರ್



ಮಲ್ಲಮ್ಮ ನುಡಿ ವಾರ್ತೆ

ಬೀದರ. ಫೆ. 10 : ನಗರದ ಬಸವಗೀರಿಯಲ್ಲಿ ಮೂರು ದಿನಗಳ ಕಾಲ ನಡಯಲಿರುವ ವಚನ ವಿಜಯೋತ್ಸವಕ್ಕೆ ವಿಧಾನ ಸಭಾಧ್ಯಕ್ಷ ಯು.ಟಿ ಖಾದರ್ ಉದ್ಘಾಟನೆ ಮಾಡಿದರು. ಕರ್ನಾಟಕ ದ ಹೆಮ್ಮೆಯ ವಚನ ವಿಜಯೋತ್ಸವಕ್ಕೆ ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದಾರೆ. ನಗರದ ಬಸವಗೀರಿಯಲ್ಲಿ ಬಸವ ಸೇವಾ ಪ್ರತಿಷ್ಠಾನ ಅಧ್ಯಕ್ಷ ಡಾ.ಗಂಗಾಂಬಿಕಾ ಅಕ್ಕಾ ಅವರ ನೇತೃತ್ವದಲ್ಲಿ ವಚನ ವಿಜಯೋತ್ಸವ ಕಾರ್ಯಕ್ರಮ ನಡೆಯಲಿವೆ. ಬೀದರ ಜಿಲ್ಲಾ ಉಸ್ತುವಾರಿ ಸಚಿವ ಅರಣ್ಯ ಸಚಿವ ಈಶ್ವರ ಖಂಡ್ರೆ, ಪೌರಾಡಳಿತ ಮತ್ತು ಹಜ್ ಸಚಿವ ರಹೀಂಖಾನ್ ಸೇರಿದಂತೆ ವಿವಿಧ ರಾಜಕೀಯ ಮುಖಂಡರು ಸಾಥ ನೀಡಿದ್ದರು. ಕರ್ನಾಟಕ ವಿವಿಧ ಜಿಲ್ಲೆಯ ಸಹಸ್ರಾರು ಬಸವ ಭಕ್ತರು ಭಾಗಿಯಾಗಿದ್ದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಯುಟಿ ಖಾದರ್, ರಾಜಕೀಯ ಬಿಟ್ಟು ನಾವು ಇಲ್ಲಿಗೆ ಎಲ್ಲರೂ ಬಂದಿದ್ದೇವೆ. ಭಾರತ ದೇಶ ಅತ್ಯುತ್ತಮವಾಗಿ ಮುಂದೆ ಹೋಗಬೇಕಾದರೆ 50% ರಷ್ಟು ಮಹಿಳೆಯರಿಗೆ ಸ್ಥಾನ ನೀಡಬೇಕು. ಸಾಮಾಜಿಕ ಪೀಡುಗೆಗೆ ದಟ್ಟ ಔಷಧವೇ ಬಸವ ತತ್ವ. ಇದನ್ನು ಒಂಬತ್ತು ನೂರು ವರ್ಷ ದ ಹಿಂದೆ ಬಸವಣ್ಣ ಹೇಳಿದ್ದಾರೆ. ವಚನ ಜನಜಾಗೃತಿ ಮಾಡುವುದು ನಮ್ಮ ಕರ್ತವ್ಯ ವಾಗಿದೆ ಎಂದರು.



ಹುಮನಾಬಾದ್. ಮಾಣಿಕನಗರದ ಐತಿಹಾಸಿಕ ಹನುಮಾನ ದೇವಸ್ಥಾನ ಸ್ಥಾಪನದಿನ ಇರುವುದರಿಂದ. ಸೋಮವಾರ. ಡಾ.ಜ್ಞಾನ ರಾಜ ಶ್ರೀ ಗಳು ವಿಶೇಶ ಪೂಜೆ ನೆರವೆರಿಸಿದರು. ಈ ಸಂದರ್ಬದಲ್ಲಿ, ಆನಂದರಾಜ ಪ್ರಭು, ಚೇತನರಾಜ ಪ್ರಭು, ಸೇರಿದಂತೆ ಇತರರಿದ್ದರು.

## ಕೆಕೆಆರ್‌ಡಿಬಿಯಿಂದ ಜಾಹೀರಾತು ಪರಿಶೀಲನೆಯ ಭರವಸೆ



ಮಲ್ಲಮ್ಮ ನುಡಿ ವಾರ್ತೆ


ಕಲಬುರಗಿ: ಫೆ. 10 : ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಕಚೇರಿಯಿಂದ ಈ ಭಾಗದ ಪತ್ರಿಕೆಗಳಿಗೆ ಜಾಹೀರಾತುಗಳು ನೀಡಬೇಕೆಂಬ ಬಹುದಿನಗಳ ಬೇಡಿಕೆಗೆ ಸ್ಪಂದಿಸಿ ಮುಂದಿನ ದಿನಗಳಲ್ಲಿ ಈ ಬಗ್ಗೆ ಪರಿಶೀಲನೆ ಮಾಡಿ ನಿರ್ಧಾರ ಮಾಡಲಾಗುವುದೆಂದು ಕೆ-ಕೆಆರ್‌ಡಿಬಿ ಅಧ್ಯಕ್ಷರು ಹಾಗೂ ಶಾಸಕರಾದ ಡಾ.ಅಜಯ್‌ಸಿಂಗ್ ಅವರು ಭರವಸೆ ನೀಡಿದ್ದಾರೆ.

ಅವರು ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ಬೀದರ್, ಕಲಬುರಗಿ, ಯಾದಗಿರಿ ಘಟಕಗಳ ಅಧ್ಯಕ್ಷರು, ಪದಾಧಿಕಾರಿಗಳ ನಿಯೋಗಕ್ಕೆ ಈ ಭರವಸೆ ನೀಡಿದರು.

ಕಲ್ಯಾಣ ಕರ್ನಾಟಕ ಹಿಂದುಳಿದ ಭಾಗವೆಂಬ ಕಾರಣಕ್ಕೆ ಸರ್ಕಾರ ಅಭಿವೃದ್ಧಿ ಮಂಡಳಿ ರಚಿಸಿದ್ದು ಇದಕ್ಕಾಗಿ ಪ್ರತಿ ವರ್ಷ 5000 ಕೋಟಿ ಅನುದಾನ ಬರುತಿದ್ದು 371(ಜೆ) ಅಡಿಯಲ್ಲಿ ಈ ಭಾಗದ ಪತ್ರಿಕೆಗಳು ಸಹ ಅಭಿವೃದ್ಧಿ ಪಡಿಸಲು ಕೆಕೆಆರ್‌ಡಿಬಿ ಮುಂದಾಗಬೇಕು. ಪತ್ರಿಕೆಗಳ ಬೆಳವಣಿಗೆಗಾಗಿ

(2ನೇ ಪುಟ ನೋಡಿ)

## ಅಂಕ ಗಳಿಕೆಯೇ ಸಾಧನೆಯಲ್ಲ, ಜ್ಞಾನ ಸಂಪಾದನೆ ಮುಖ್ಯ:ಮೋದಿ



ಮಲ್ಲಮ್ಮ ನುಡಿ ವಾರ್ತೆ

ನವದೆಹಲಿ,ಫೆ.10: ಜೀವನದಲ್ಲಿ ಅಂಕಗಳಿಸುವುದೇ ಮಹಾನ್ ಸಾಧನೆಯಾಗುವುದಿಲ್ಲ. ಅದಕ್ಕಿಂತಲೂ ಜ್ಞಾನಸಂಪಾದನೆ ಮಾಡುವುದು ಮುಖ್ಯ. ಸಮಯ ನಿರ್ವಹಣೆ, ಕಾರ್ಯತಂತ್ರ, ಸ್ಪರ್ಧಾತಕ ಯುಗಕ್ಕೆ ತಕ್ಕಂತೆ ಸಿದ್ಧರಾಗಬೇಕೆಂದು ಪ್ರಧಾನಿ ನರೇಂದ್ರಮೋದಿ ಅವರು ವಿದ್ಯಾರ್ಥಿಗಳಿಗೆ ಕರೆಕೊಟ್ಟಿದ್ದಾರೆ.

ಪ್ರತಿ ವರ್ಷದಂತೆ ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳ ಜೊತೆ ನಡೆಸುವ ಪರೀಕ್ಷಾ ಪೇ ಚರ್ಚಾದಲ್ಲಿ ಮಾತನಾಡಿದ ಅವರು ವಿದ್ಯಾರ್ಥಿಗಳಿಗೆ ಹಲವಾರು ವಿಷಯಗಳನ್ನು ಒತ್ತಿ ಹೇಳಿದರು.

ನೀವು ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸುವುದು, ಡಿಸ್ಟಿಂಕ್ಷನ್ನಲ್ಲಿ ತೇರ್ಗಡೆಯಾಗುವುದೇ ನಿಮ ಗುರಿಯಾಗಿರಬಾರದು. ಯಶಸ್ಸು ಸಾಧಿಸುವವರು ನಿಮಗೆ ಆದರ್ಶರಾಗಬೇಕು. ಒಲಿಂಪಿಕ್ ವಿಜೇತೆ ಮೇರಿ ಕೋಮ್, ಪ್ಯಾರ ಒಲಿಂಪಿಕ್ ಚಿನ್ನದ ವಿಜೇತೆ ಅವಾನಿ ಲೇಕಾರ, ಆಧ್ಯಾತಿಕ ನಾಯಕ ಸದ್ಗುರು, ಚಿತ್ರನಟಿ ದೀಪಿಕಾ ಪಡುಕೋಣೆ, ವಿಕ್ರಮ್ ಮಸ್ಸಿ ಮತ್ತಿತರರು ನಿಮಗೆ ಆದರ್ಶಪ್ರಾಯರಾಗಬೇಕೆಂದು

(2ನೇ ಪುಟ ನೋಡಿ)

## ನಾಡಿನ ಕಲೆ ಉಳಿಸಿ ಬೆಳೆಸುವ ಕೆಲಸವಾಗಬೇಕು:ಪೂಜಾರ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ : ಫೆ. 10 : ಯುವಕರು ನಮ್ಮ ದೇಶದ ನೆಲ, ಸಂಸ್ಕೃತಿ ಎತ್ತಿಹಿಡಿಯುವ ಕೆಲಸವಾಗಬೇಕು. ನಮ್ಮ ದೇಶ ಕಲಾವಿದರಿಂದ ತುಂಬಿದ ಶ್ರೀಮಂತ ದೇಶವಾಗಿದ್ದು, ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸು ನಿಟ್ಟಿನಲ್ಲಿ ಎಲ್ಲರೂ ಶ್ರಮಿಸಬೇಕಿದೆ. ಆರ್ಥಿಕವಾಗಿ, ಸಾಮಾಜಿಕವಾಗಿ ಶ್ರೀಮಂತ ದೇಶ ಅಂತ ಹೇಳಲಿಕ್ಕೆ ಆಯಾ ಕಾಲದಲ್ಲಿ ಆಗಿಹೋದ ಶರಣ-ರು, ಸಂತರು ಇವರೆಲ್ಲರೂ ಕಾರಣೀಬೂತರೆಆಗಿದ್ದಾರೆ. ಕೇಂದ್ರ ಸರಕಾರ ಸಹ ಕಲಾವಿದರಿಗೆ ಪ್ರೋತ್ಸಾಹಿಸುವ ಮೂಲಕ




ಕಲೆಗಳನ್ನು ಉಳಿಸಿ ಬೆಳೆಸುವ ಕಾರ್ಯ ಮಾಡಲಾಗುತ್ತಿದೆ ಎಂದು ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಅವರು ತಿಳಿಸಿದರು.

ಇತ್ತೀಚೆಗೆ ಬಾಗಲಕೋಟೆಯ ಡಾ.ವೆಂಕಪ್ಪ ಸುಗತೇಕರ ಅವರಿಗೆ ಪ್ರಶಸ್ತ ಸಾಲಿನ ಪ್ರಶಸ್ತಿ ಪ್ರಶಸ್ತಿ ಪಡೆದುಕೊಂಡಿರುವುದು ಹೆಮ್ಮೆಯ ವಿಷಯವಾಗಿದೆ. ಕಲಾವಿದರು ತಮ್ಮ ಕಲೆಯ ಮೂಲಕ ಸಮಾಜಕ್ಕೆ ಕೊಡುಗೆ ನೀಡಿದವರು. 2017 ರಿಂದ ಪ್ರಾರಂಭವಾದ ರಾಜ್ಯ ಬಯಲಾಟ ಅಕಾಡೆಮಿ ಕಲಾವಿದರನ್ನು ಗುರುತಿಸಿ ಗೌರವಿಸುವ ಕೆಲಸ ಮಾಡುತ್ತಿದೆ. ಕಲೆಯನ್ನು ಉಳಿಸಿ ಬೆಳೆಸುವಲ್ಲಿ ಕೇವಲ ಈ ಕಾರ್ಯ ಅಕಾಡೆಮಿಯದಲ್ಲ ನಮ್ಮೆಲ್ಲರದ್ದಾಗಿದೆ ಎಂದು ತಿಳಿಸಿದರು.

ಕರ್ನಾಟಕ ಬಯಲಾಟ ಅಕಾಡೆಮಿ ವತಿಯಿಂದ ಹಮ್ಮಿಕೊಂಡ 2021, 2022, 2023 ಹಾಗೂ 2024ನೇ ಸಾಲಿನ ರಾಜ್ಯ ಮಟ್ಟದ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ 20 ಜನರಿಗೆ ಗೌರವ ಪ್ರಶಸ್ತಿ ಹಾಗೂ 39 ಜನರಿಗೆ ವಾರ್ಷಿಕ

(2ನೇ ಪುಟ ನೋಡಿ)

## ಒಂದನೇ ಪುಟದಿಂದ

## ವಿಮಾನ ಹಾರಾಟ..? ನನಸಾಗದ ಕನಸು

ಲೋಕಾರ್ಪಣೆಗೊಳಿಸಿದ್ದರು. 5 ವರ್ಷಗಳಲ್ಲಿ ಎರಡು ವಿಮಾನಯಾನ ಸಂಸ್ಥೆಗಳು ವಿಮಾನ ಸೇವೆ ಸ್ಥಗಿತಗೊಳಿಸಿವೆ. ಸದ್ಯ ಬೀದರ್‌ಗೆ ಯಾವುದೇ ವಿಮಾನ ಆಗಮಿಸುತ್ತಿಲ್ಲ. ಇದರಿಂದ ಜನಪ್ರತಿನಿಧಿಗಳು, ಉದ್ಯಮಿಗಳು, ವ್ಯಾಪಾರಸ್ಥರು ನೆರೆಯ ಹೈದರಾಬಾದ್, ಕಲಬುರಗಿ ವಿಮಾನ ನಿಲ್ದಾಣದಿಂದ ಬೆಂಗಳೂರು, ಮುಂಬಯಿ ಇತರೆ ನಗರಗಳಿಗೆ ಪ್ರಯಾಣ ಬೆಳೆಸುವಂತಾಗಿದೆ.

ಬೀದರ್–ಬೆಂಗಳೂರು ನಡುವೆ ಟ್ರೂ ಜೆಟ್27 ಸೀಟುಗಳ ವಿಮಾನ ಸೇವೆ ಆರಂಭಿಸಿತ್ತು. ಆದರೆ ಕೆಲ ತಿಂಗಳಿನಲ್ಲಿ ಪ್ರಯಾಣಿ ಕರ ಕೊರತೆಯಿಂದ ಈ ಸೇವೆ ಸ್ಥಗಿತಗೊಳಿಸಿತ್ತು. 2022ರ ಜೂನ್‌ನಲ್ಲಿ ಸ್ಟಾರ್ ಏರ್ ವಿಮಾನ ಸೇವೆ ಆರಂಭಿಸಿತು. ಆದರೆ ಒಂದು ವರ್ಷದ ಹಿಂದೆ ಆರ್ಥಿಕ ನಷ್ಟದ ನೆಪವೊಡ್ಡಿ ಈ ಸೇವೆ ಸಹ ರದ್ದುಗೊಳಿಸಿದೆ. ಸುಸಜ್ಜಿತ ವಿಮಾನ ನಿಲ್ದಾಣವಿದ್ದರೂ ಬೀದರ್‌ಗೆ ವಿಮಾನ ಸೇವೆ ಇಲ್ಲದಂತಾಗಿದೆ.

## ಪರಿಶೀಲನೆಯ ಭರವಸೆ

ಕೆಕೆಆರ್‌ಡಿಬಿಯ ಅಭಿವೃದ್ಧಿ ಕಾಮಗಾರಿಗಳ ಪಕ್ಷಿ ನೋಟವನ್ನು ಜಾಹೀರಾತು ರೂಪದಲ್ಲಿ ನೀಡಿ ಪ್ರೋತ್ಸಾಹಿಸಬೇಕೆಂದು ಅವರಿಗೆ ಮನವರಿಕೆ ಮಾಡಿ ಕೊಟ್ಟು ಸಂಘದಿಂದ ಮನವಿ ಪತ್ರ ನೀಡಿ ಮನವಿ ಮಾಡಿದಾಗ ಅವರು ಹಲವಾರು ವಿಚಾರಗಳ ಕುರಿತು ವಿವಿಧ ಆಯಾಮಗಳ ಬಗ್ಗೆ ಪರಾಮರ್ಶಿಸಿ ನಿರ್ಧಾರ ಕೈಗೊಳ್ಳುವುದಾಗಿ ಸಂಘದ ಪದಾಧಿಕಾರಿಗಳ ನಿಯೋಗಕ್ಕೆ ಆಶ್ವಾಸನೆ ನೀಡಿದರು. ನಮ್ಮ ಬೀದರ್, ಕಲ್ಬುರ್ಗಿ, ಯಾದಗಿರಿ ಸಂಪಾದಕರ ಸಂಘದ ಮತ್ತು ಸಂಪಾದಕರ ಜೊತೆ ಧೀರ್ಘ ಕಾಲ ಮಾತನಾಡಿ ಯಾವ ರೀತಿ ಮಾಡಿದರೆ ಜಾಹೀರಾತು ನೀಡಬಹುದು ಎಂದು ಮುಂದಿನ ದಿನಗಳಲ್ಲಿ ಚರ್ಚಿಸಿ ಒಳ್ಳೆಯ ನಿರ್ಧಾರ ಕೈಗೊಳ್ಳುವೆ ಎಂಬ ಭರವಸೆಯನ್ನು ಕೆಕೆಆರ್ ಡಿಬಿ ಅಧ್ಯಕ್ಷರು ನೀಡಿದ್ದಾರೆ.

ಕಲಬುರಗಿ ವಿಭಾಗದ ನಿಯೋಗದಲ್ಲಿ ಬೀದರ್ ಸಂಪಾದಕರ ಸಂಘದಿಂದ ಸಿದ್ಧಪಡಿಸಿದ ಮನವಿ ಪತ್ರಕ್ಕೆ ಎಲ್ಲಾ ಜಿಲ್ಲೆಯ ಅಧ್ಯಕ್ಷರು ,ಪ್ರಧಾನ ಕಾರ್ಯದರ್ಶಿಗಳು, ಪದಾಧಿಕಾರಿಗಳು ಬೆಂಬಲ ವ್ಯಕ್ತಪಡಿಸಿದರು. ಬೀದರ್ ಜಿಲ್ಲೆ ಸಂಪಾದಕರ ಸಂಘದ ಅಧ್ಯಕ್ಷ ವಿಜಯಕುಮಾರ್ ಪಾಟೀಲ್ ಕೆಕೆಆರ್ ಡಿಬಿ ಅಧ್ಯಕ್ಷರಿಗೆ ಸೋಮವಾರ ಮನವಿ ಪತ್ರ ನೀಡಿದರು. ನಮ್ಮ ಜೊತೆ ಕಲಬುರ್ಗಿ ಜಿಲ್ಲೆ ಅಧ್ಯಕ್ಷ ಸಿದ್ದರಾಮಪ್ಪ ಮಾಲಿ ಬಿರಾದರ್, ಪ್ರಧಾನ ಕಾರ್ಯದರ್ಶಿ ಆನಂದ್ ಮಣ್ಣೂರು, ಗುರುರಾಜ್ ಕುಲಕರ್ಣಿ ಕರ್ನಾಟಕ ಮಾಧ್ಯಮ ಮಾನ್ಯತಾ ಸಮಿತಿ ಸದಸ್ಯರು, ಯಾದಗಿರಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹಿರೇಮಠ್, ಹಿರಿಯ ಪತ್ರಕರ್ತರಾದ ಅದಿಜುಲ್ ಶರಮಸ್ತ , ರಾಮಚಂದ್ರ ಬೋಸ್ಲೆ, ವಿ.ವಿ.ದೇಸಾಯಿ, ಪ್ರದೀಪ ಬಿರಾದಾರ, ಪ್ರಕಾಶ್ ಪೂಜಾರಿ, ಶರತ್ ಘಂಟೆ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಜ್ಞಾನ ಸಂಪಾದನೆ ಮುಖ್ಯ:ಮೋದಿ

ಕಿವಿಮಾತು ಹೇಳಿದರು.ಪ್ರತಿಯೊಬ್ಬ ವಿದ್ಯಾರ್ಥಿಗಳು ಸಮಯ ಪಾಲನೆ ಮಾಡುವುದು ಅತ್ಯಗತ್ಯ. ಶಿಕ್ಷಕರು ನೀಡುವ ಪಠ ಚಟುವಟಿಕೆಗಳನ್ನು ಅಂದೆಯೇ ಕಲಿಯಬೇಕು. ತಂದೆತಾಯಿಗಳು ಒತ್ತಾಯ ಮಾಡುವ ಯಾವುದೇ ವಿಷಯಗಳ ಬಗ್ಗೆ ಗಮನ ನೀಡಬೇಡಿ. ನಿಮಗೆ ನೀವು ಮನಸಾರೆ ಇಷ್ಟಪಡುವ ವಿಷಯಗಳ ಮೇಲೆ ಹೆಚ್ಚು ಗಮನಹರಿಸಬೇಕು. ಯಾವ ವಿಷಯಗಳನ್ನು ಎಷ್ಟು ಸಮಯದಲ್ಲಿ ಓದಬೇಕು ಎಂಬುದನ್ನು ಮೊದಲೇ ಖಾತ್ರಿಪಡಿಸಿಕೊಂಡು ಸಮಯ ನಿಗದಿಪಡಿಸಿಕೊಳ್ಳಿ ಎಂದು ಸಲಹೆ ಮಾಡಿದರು.ಶಿಕ್ಷಕರು ಕೂಡ ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಇಂತಿಷ್ಟೆ? ಅಂಕಗಳನ್ನು ತೆಗೆಯಬೇಕೆಂದು ಒತ್ತಡ ಹಾಕಬಾರದು. ನೀವು ಪ್ರತಿಯೊಂದು ವಿಷಯಕ್ಕೂ ಶಿಕ್ಷಣ ತಜ್ಞರ ಸಲಹೆ ಕೇಳುವುದನ್ನು ಮೊದಲು ನಿಲ್ಲಿಸಿ ಅದನ್ನು ಮೀರಿ ಹೋದಾಗ ಮಾತ್ರ ಯಶಸ್ಸು ಸಾಧಿಸಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ವಿದ್ಯಾರ್ಥಿಗಳಿಗೆ ಶಾಲೆಯಲ್ಲಿ ಉತ್ತಮವಾದ ಪರಿಸರವನ್ನು ಸೃಷ್ಟಿಸಬೇಕು. ಜೀವನದ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಒತ್ತು ನೀಡಬೇಕು. ಹಿರಿಯ ಆದರ್ಶಗಳನ್ನು ಪ್ರತಿದಿನ ತಿಳಿ ಹೇಳಬೇಕು. ಮೌಲ್ಯಯುತ ಜೀವನ ಏನೆಂಬುದನ್ನು ತಿಳಿ ಹೇಳಬೇಕು ಎಂದು ತಿಳಿಸಿದರು.ವಿದ್ಯಾರ್ಥಿಗಳು ಶೈಕ್ಷಣಿಕ ಪರೀಕ್ಷೆಗಳನ್ನೆ? ನಿಜವಾದ ಕಲಿಕೆ ಎಂದು ತಪ್ಪಾಗಿ ಗ್ರಹಿಸಿದ್ದಾರೆ. ಪರೀಕ್ಷೆಯಲ್ಲಿ ಅಂಕ ಗಳಿಸುವುದಕ್ಕಷ್ಟೆ? ತಯಾರಿ ಮಾಡಿಕೊಂಡರೆ ಸಾಲದು. ಜ್ಞಾನ ಗಳಿಸುವತ್ತಲೂ ಗಮನಹರಿಸಬೇಕು. ಇದಕ್ಕೆ ಕೇವಲ ಶಿಕ್ಷಕರು ಮಾತ್ರವಷ್ಟೆ? ಅಲ್ಲ ಪೋಷಕರು ಕೂಡ ಕೈಜೋಡಿಸಬೇಕು ಎಂದು ಹೇಳಿದರು.ವಿದ್ಯಾರ್ಥಿಗಳ ಒತ್ತಡ ನಿಭಾಯಿಸುವುದನ್ನು ಕಲಿಯಬೇಕು. ಕ್ರಿಕೆಟ್ ಆಡುವಾಗ ಬ್ಯಾಟ್ಸಮನ್ಗಳಿಗೆ ಅನೇಕ ಒತ್ತಡ ಇರುತ್ತದೆ. ಒಂದು ಕಡೆ ಹೆಚ್ಚು ರನ್ ಗಳಿಸಬೇಕು ಮತ್ತೊಂದು ಕಡೆ ಎದುರಾಳಿ ಬೌಲರ್ಗಳನ್ನು ಎದುರಿಸಬೇಕು. ಇದರ ನಡುವೆ ಕ್ರಿ?ಡಾಂಗಣದಲ್ಲಿ ಕುಳಿತಿರುವ ಪ್ರೆ?ಕ್ಷಕರ ಗದ್ದಲವೂ ಏಕಾಗ್ರತೆಗೆ ಭಂಗವಾಗುತ್ತದೆ. ಇಷ್ಟೆಲ್ಲದರ ನಡುವೆಯೂ ಬ್ಯಾಟ್ಸಮನ್ ಬೌಲರ್ ಹಾಕುವ ಬಾಲ್ನು ಕೇಂದ್ರಿ?ಕರಿಸಿ ರನ್ ಗಳಿಸುತ್ತಾನೆ. ಇದು ನಿಜವಾದ ಏಕಾಗ್ರತೆ ಎಂದರು.ವಿದ್ಯಾರ್ಥಿಗಳು ಕೇವಲ ಓದುವುದು, ಬರೆಯುವುದಕ್ಕೆ ಮಾತ್ರ ಸೀಮಿತವಾಗಬೇಡಿ. ಉತ್ತಮ ಆರೋಗ್ಯ, ಹಿತಮಿತ ಆಹಾರ, ನಿದ್ರೆಯನ್ನು ಮಾಡುವುದನ್ನು ಮರೆಯಬೇಡಿ. ನಿದ್ರೆ ಮತ್ತು ಸಮತೋಲನ ಆಹಾರ ಸೇವನೆ ನಮ ಉತ್ತಮ ಆರೋಗ್ಯಕ್ಕೆ ಪ್ರಮುಖ ಅಂಶಗಳು. ಪರೀಕ್ಷೆಯನ್ನು ಯಾವುದೇ ಅಂಜುಅಳಕು ಇಲ್ಲದೆ ಸಕಾರಾತಕವಾಗಿ ಎದುರಿಸಿ. ಖಂಡಿತವಾಗಿಯೂ ನಿಮಗೆ ಒಳ್ಳೆಯದಾಗುತ್ತದೆ ಎಂದು ಮೋದಿ ವಿದ್ಯಾರ್ಥಿಗಳಿಗೆ ಸಲಹೆ ಮಾಡಿದರು.ಪೋಷಕರು ಬೇರೆಯ ಮಕ್ಕಳನ್ನು ನೋಡಿ ತಮ ಮಕ್ಕಳು ಹೀಗೆಯೇ ಇರಬೇಕು, ಬೇರೆಯವರ ಮನೆಯ ಮಕ್ಕಳಂತೆಯೇ ಓದಬೇಕೆಂದು ಬಯಸಬೇಡಿ. ನಿಮ ಮಕ್ಕಳಿಗೆ ಯಾವ ವಿಷಯದ ಬಗ್ಗೆ ಹೆಚ್ಚು ಆಸಕ್ತಿ ಇರುತ್ತದೋ ಅದೇ ವಿಚಾರಗಳನ್ನು ಓದಲು ಅನುವು ಮಾಡಿಕೊಡಿ ಎಂದು ಮನವಿ ಮಾಡಿದರು.ನಾವು ರೋಬೋಟ್ಗಳಲ್ಲ, ಮನುಷ್ಯರು. ಮಕ್ಕಳನ್ನು ನಾಲ್ಕು ಗೋಡೆಗಳೊಳಗೆ ಬಂಧಿಸಿ ಪುಸ್ತಕಗಳ ಸೆರೆಮನೆಯನ್ನಾಗಿ ಮಾಡಿದರೆ, ಅವರು ಎಂದಿಗೂ ಬೆಳೆಯಲು ಸಾಧ್ಯವಾಗುವುದಿಲ್ಲ, ತೆರೆದ ಆಗಸವನ್ನು ಅವರಿಗಾಗಿ ನೀಡಬೇಕು ಸ್ವಾತಂತ್ರವೂ ಕೂಡ ಅಷ್ಟೆ? ಮುಖ್ಯ ಎಂದರು.ನೀವು ಪ್ರಧಾನಿಯಾಗಿರದಿದ್ದರೆ ಮತ್ತು ಸಚಿವರಾಗಿದ್ದರೆ ನೀವು ಯಾವ ಇಲಾಖೆಯನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಿರಿ ಎಂಬ ಪ್ರಶ್ನೆಗೆ ಉತ್ತರಿಸಿದ ಪ್ರಧಾನಿ, ಕೌಶಲ್ಯ ಬಹಳ ಮುಖ್ಯವಾದ ಕಾರಣ ನಾನು ಕೌಶಲ್ಯ ವಿಭಾಗವನ್ನು ಆಯ್ಕೆ ಮಾಡುತ್ತೇನೆ ಎಂದು ಹೇಳೀದರು. ಈ ಬಾರಿ ಪ್ರಧಾನಿ ನರೇಂದ್ರಮೋದಿ ಅವರ ಪರೀಕ್ಷಾ ಪೇ ಚರ್ಚೆಯಲ್ಲಿ 3.3 ಕೋಟಿ ವಿದ್ಯಾರ್ಥಿಗಳು, 20,71,000 ಶಿಕ್ಷಕರು ಹಾಗೂ 5.51 ಲಕ್ಷ ಪೋಷಕರು ಭಾಗಿಯಾಗಿದ್ದರು.

## ಕಾಡು ಉಳಿದರೆ ನಾಡು ಉಳಿದೀತು:ಸುಗತೇಕರ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಫೆ.10–ಕಾಡು ಉಳಿದರೆ ನಾಡು ಉಳಿದೀತು ಎನ್ನುವಂತೆ ಅರಣ್ಯ ರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ ಎಂದು ಗೋಂದಳಿ ಕಲಾವಿದ ಅಂಬಾಜಿಸುಗತೇಕರಹೇಳಿದ್ದಾರೆ.

ಬಾಗಲಕೋಟೆ ಪ್ರಾದೇಶಿಕ ಅರಣ್ಯ ವಿಭಾಗ ತಾಲೂಕಿನ ಶಿರೂರ ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ಕಾಡ್ಗಿಚ್ಚು, ವನ್ಯಜೀವಿಗಳ ಭೇಟೆ ನಿಷೇಧ ಕುರಿತು ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪರಿಸರ ನಮ್ಮ ಆರೋಗ್ಯ ಸಂಪತ್ತು. ಪರಿಸರ ಉತ್ತಮವಾಗಿರಲು ಕಾಡು ಉಳಿಯಬೇಕು. ಈ ಸಂಪತ್ತನ್ನು ನಾವು ಸದಾ ರಕ್ಷಿಸಬೇಕು ಎಂದರು.

ಗಿಡ–ಮರ ಬೆಳೆಸಿ ಕಾಡು ಉಳಿಸಿ ನಾಡು ಬೆಳೆಸುವ ಕುರಿತಾದ ಹಾಡು ಹೇಳಿದ ಸುಗತೇಕರ ತಂಡದವರು, ಬೀದಿ ನಾಟಕದ ಮೂಲಕ ವನ್ಯಜೀವಿಗಳ ರಕ್ಷಣೆ ಕುರಿತು ಜನಜಾಗೃತಿ ಮೂಡಿಸಿದರು. ಕಲಾ ತಂಡದಲ್ಲಿ ಹನಮಂತ ಸುಗತೇಕರ, ಚೇತನ ಸುಗತೇಕರ, ರಾಹುಲ ಸುಗತೇಕರ, ಅನಿತಾ ಸುಗತೇಕರ, ಜನಾಬಾಯಿ ಸುಗತೇಕರ ಇದ್ದರು. ಅರಣ್ಯ ಇಲಾಖೆಯ ಗಸ್ತು ಅರಣ್ಯ ಪಾಲಕ ಅಮೀನಸಾಬ ಗುಜರಾತ ಹಾಗೂ ಶಿರೂರ ಪಟ್ಟಣದ ಹಿರಿಯರು, ಯುವಕರು ಪಾಲ್ಗೊಂಡಿದ್ದರು.

## ಕೆಲಸವಾಗಬೇಕು:ಪೂಜಾರ

ಪ್ರಶಸ್ತಿಯನ್ನು ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಪ್ರಧಾನ ಮಾಡಿ ಮಾತನಾಡಿದರು.ನವನಗರದ ಕಲಾಭವನದಲ್ಲಿ ಸೋಮವಾರ ನಡೆದ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ 4 ವರ್ಷದ ಗೌರವ ಹಾಗೂ ವಾರ್ಷಿಕ ಪ್ರಶಸ್ತಿ ಸೇರಿ ಒಟ್ಟು 59 ಪುರಸ್ಕೃತರಿಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಪ್ರಶಸ್ತಿ ಪ್ರತಿ ಸಾಲಿಗೆ 5 ಜನರಿಗೆ ಗೌರವ ಪ್ರಶಸ್ತಿ ಹಾಗೂ 10 ಜನರಿಗೆ ವಾರ್ಷಿಕ ಪ್ರಶಸ್ತಿ ನೀಡಲಾಗುತ್ತಿದೆ. 2022ನೇ ಸಾಲಿನಲ್ಲಿ 9 ಜನರಿಗೆ ವಾರ್ಷಿಕ ಪ್ರಶಸ್ತಿ ನೀಡಲಾಯಿತು. ಗೌರವ ಪ್ರಶಸ್ತಿ 50 ಸಾವಿರ ರೂ, ನಗದು ಹಾಗೂ ಪ್ರಶಸ್ತಿ ಫಲಕ, ವಾರ್ಷಿಕ ಪ್ರಶಸ್ತಿಗೆ ತಲಾ 25 ಸಾವಿರ ರೂ. ನಗದು ಹಾಗೂ ಪ್ರಶಸ್ತಿ ಫಲಕ ನೀಡಲಾಯಿತು. ಗೌರವ ಪ್ರಶಸ್ತಿ ಪುರಸ್ಕೃತರು

2021ನೇ ಸಾಲಿನ ಅನುಸೂಯಾ ವಡ್ಡರ, ನರಸಪ್ಪ ಶಿರಗುಪ್ಪಿ, ವೀರಪ್ಪ ಬಿಸರಳ್ಳಿ, ಎಸ್.ಎ.ಕೃಷ್ಣಪ್ಪ, ಗೋವಿಂದಪ್ಪ ತಳವಾರ, 2022ನೇ ಸಾಲಿನ ಕೆ.ಮೌನಾಚಾರಿ, ಸುರೇಂದ್ರ ಹಲ್ಲಂಬಿ, ಶತಕಂಠ ಮಲ್ಲೇಶಯ್ಯ, ಚಂದ್ರಮ್ಮ, ಅಶೋಕ ಸುತಾರ, 2023ನೇ ಸಾಲಿನ ಡಾ.ಡಿ.ಕೆ.ರಾಜೇಂದ್ರ, ಸಿದ್ರಾಮ ಸಾತಪ್ಪ ನಾಯಕ, ನಾರಾಯಣ ಪತ್ತಾರ, ಓಂಕಾರಮ್ಮ, ಕೆ.ಇಮಾಮ್‌ಸಾಬ. 2024ನೇ ಸಾಲಿನ ಎಚ್.ಎಂ.ಪಂಪಯ್ಯಸ್ವಾಮಿ, ಗಂಗಮ್ಮ, ಕೊಪ್ಪಳದ ತಿಮ್ಮಣ್ಣ ಚನ್ನದಾಸರ, ಈಶ್ವರಪ್ಪ ಹಲಗಣಿ, ಶಿವಣ್ಣ ಬಿರಾದಾರ.ವಾರ್ಷಿಕ ಪ್ರಶಸ್ತಿ ಪುರಸ್ಕೃತರು2021ನೇ ಸಾಲಿನ ಸುಂದ್ರವ್ವ ಮೇತ್ರಿ, ಫಕೀರಪ್ಪ ಗೌರಕ್ಕನವರ, ಚಂದ್ರಶೇಖರ ಮೇಲಿನಮನಿ, ದುಂಡಪ್ಪ ಗುಡ್ಡಾ, ಚಂದ್ರಶೇಖರ ಗುರಯ್ಯನವರ, ಸುಶೀಲಾ ಮಾದರ, ಯಂಕೋಬ ಮುನಿಯಪ್ಪ, ಚಂದ್ರಪ್ಪ ಶರಣಪ್ಪ, ಎಂ.ಆರ್.ವಿಜಯ, ದಾನಪ್ಪ ಹಡಪದ, 2022ನೇ ಸಾಲಿನ ಮಲ್ಲಪ್ಪ ಗಣಿ, ಫಕೀರೇಶ ಬಿಸೆಟ್ಟಿ, ಕೆ.ನಾಗರತ್ನಮ್ಮ, ಕೆಂಪಣ್ಣ ಚೌಗಲಾ, ರಾಮಚಂದ್ರಪ್ಪ ಕಟ್ಟಿಮನಿ, ಅಂಬುಜಮ್ಮ, ಕೆ.ಪಿ.ಭೂತಯ್ಯ, ಜಿ.ರಾಮಪ್ರಭು, ಫಕೀರಪ್ಪ ನೆರ್ತಿ, 2023ನೇ ಸಾಲಿನ ಕೆ.ರಾಮಚಂದ್ರಪ್ಪ, ಕೃಷ್ಣಪ್ಪ ಪೂಜಾರ, ಕೆ.ಎಂ. ರಘುಪಾಲಯ್ಯ, ಮಲ್ಲೇಶಪ್ಪ ಭಜಂತ್ರಿ, ಅಮರೇಶ ತಿಮ್ಮಯ್ಯ, ಚಂದ್ರವ್ವ ನೀಲಪ್ಪನವರ, ಎಂ.ಬಡಪ್ಪ,' ರುದ್ರಪ್ಪ ಸಾಳುಂಕೆ, ಚುಕ್ಕನಕಲ್ಲು ರಾಮಣ್ಣ, ತಿಪ್ಪಣ್ಣ ದೊಡ್ಡೆಗೌಡ.2024ನೇ ಸಾಲಿನ ಚಿತ್ರದುರ್ಗದ ಗುಗ್ ಮಲ್ಲಯ್ಯ, ಬೆಳಗಾವಿಯ ಭರಮಪ್ಪ ಸತ್ತೆನ್ನವರ, ದಾವಣಗೇರಿಯ ಬಾಲಮ್ಮ ಕಾಟಪ್ಪ, ವಿಜಯನಗರದ ಡಿ.ಎಂ.ಯರಿಸ್ವಾಮಿ, ಬಾಗಲಕೋಟೆಯ ಗ್ಯಾನಪ್ಪ ಮಾದರ, ತುಮಕೂರಿನ ಶಂಕರಪ್ಪ ಎ.ಬಿ, ವಿಜಯನಗರದ ಕೊಟ್ಗಿ ಹಾಲೇಶ್ವರ, ವಿಜಯಪುರದ ರುದ್ರಗೌಡ ಬಿರಾದಾರ, ಧಾರವಾಡದ ಚೆನ್ನವೀರಪ್ಪ ಮುದಲಿಂಗಣ್ಣವರ ಹಾಗೂ ಕೆ.ಹೊನ್ನೂರಸ್ವಾಮಿ ಅವರಿಗೆ ಪ್ರಶಸ್ತಿ ನೀಡಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಜಾನಕಿಕೆ. ಎಂ ಅವರು ಪ್ರಶಸ್ತಿ ಪುರಸ್ಕೃತರ ಮಾಹಿತಿ ಕೈಪಿಡಿಯನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು ಕಲಾವಿದರು ತಮ್ಮ ಬದುಕಿನ ಮುಕ್ಕಾಲು ಭಾಗ ಸಂಸ್ಕೃತಿ ಪರಂಪರೆಯನ್ನು ಉಳಿಸುವ ಕೆಲಸವನ್ನು ಪ್ರಶಸ್ತಿ ಹಾಗೂ ಸನ್ಮಾನವನ್ನು ಆಶಿಸದೇ ಮಾಡುತ್ತಾ ಬಂದಿದ್ದಾರೆ. ಅವರ ಕಲಾಸೇವೆಗೆ ಬೆಳೆ ಕಟ್ಟಲು ಸಾಧ್ಯವಾಗುವದಿಲ್ಲ. ಜನಪದ ಲೋಕದಲ್ಲಿ ಫಲಾಪೇಕ್ಷೆಯಿಲ್ಲದೇ ಮುಂದುವರಿಸಿಕೊಂಡು ಬಂದಿದ್ದಾರೆ. ಬಯಲಾಟ ಅಕಾಡೆಯಿ ಕಲಾವಿದರ ದಾಖಲೀಕರಣ ಮಾಡಲು ಹೊರಟಿರುವುದು ಉತ್ತಮ ಕಾರ್ಯವಾಗಿದೆ. ಯಾಕೇಂದರೆ ಯಾವುದೇ ಒಂದು ಕಲೆಯನ್ನು ಮೌಖಿಕವಾಗಿ ಹೇಳಲಾಗುತ್ತಿತ್ತು.

## ವಿಶ್ವ ವಿಜೇತ ಆಟಗಾರರಿಗೆ ಆಗುತ್ತಿರುವ ಅನ್ಯಾಯವನ್ನು ತಡೆಯಲು ಕ್ರೀಡಾ ನೀತಿಯನ್ನು ಬದಲಾಯಿಸಲು ಒತ್ತಾಯ..!




ಮಲ್ಲಮ್ಮ ನುಡಿ ವಾರ್ತೆ

ಸುರಪುರ: ಯಾದಗಿರಿ ಜಿಲ್ಲಾ ಖೋ..ಖೋ.. ಅಸೋಸಿಯನ್ ಯಾದಗಿರಿ (ರೀ) ಪ್ರತಿಭಟನ ಮೆರವಣಿಗೆ ಮಾಡಿ ಜಿಲ್ಲಾಧಿಕಾರಿಗಳ ಮುಖಾಂತರ ಮನವಿ ಪತ್ರ ಸಲ್ಲಿಸಲಾಯಿತು, ವಿಷಯ ವಿಶ್ವ ವಿಜೇತ ಖೊ..ಖೊ.. ಆಟಗಾರರಿಗೆ ಸರಕಾರ ಸೂಕ್ತವಾಗಿ ಗೌರವಿಸುವುದು ಮತ್ತು ರಾಜ್ಯದಲ್ಲಿ ಕ್ರೀಡೆಗಳಿಗೆ ಆ3ಗುತ್ತಿರುವ ಅನ್ಯಾಯವನ್ನು ತಡೆಯಲು ಮತ್ತು ಕ್ರೀಡಾ ನೀತಿಯನ್ನು ಬದಲಾಯಿಸಲು ಕೋರಿ ಕರ್ನಾಟಕ ಒಲಂಪಿಕ್ ಅಧ್ಯಕ್ಷರಾ ಗೋವಿಂದ್ ರಾಜ್ ರವರ ಕ್ರೀಡೆಗಳ ಮೇಲೆ ದೌರ್ಜನ್ಯವನ್ನು ಖಂಡಿಸಿ ಬೃಹತ್ ಪ್ರತಿಭಟನೆ ಮಾಡಿ ಮನವಿ ಪತ್ರ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಮೌನೇಶ್ವರ ಕ್ಲಬ್ ಅಧ್ಯಕ್ಷರಾದ ಶ್ರೀ ಭೀಮಣ್ಣ ದಿವಳಗುಡ್ಡ ಶ್ರೀ ರಮೇಶ್ ದೊರೆ ಆಲ್ದಾಳ್. ಸಮಾಜದ ಮುಖಂಡರು ಶ್ರೀ ವೆಂಕಟೇಶ್ ಎಚ್ ಬೇಟೆಗಾರ. ಯುವ ಮುಖಂಡರು ಶ್ರೀ ಮಲ್ಲು ನಾಯಕ್ ಯಾದಗಿರಿ. ಚಂದ್ರು ಪತ್ತಾರ್ . ಶಬಿರ್ ಪಟೇಲ್ ಕೃಷ್ಣ ಯಾದವ್ .ವೆಂಕಟಪ್ಪ ನಾಯಕ್.ವೆಂಕಟೇಶ್ ಪೂಜಾರಿ .ಕ್ರೀಡಾಪಟುಗಳು ಕ್ರೀಡಾ ಅಭಿಮಾನಿಗಳು ಅನೇಕ ಜನ ಉಪಸ್ಥಿತರಿದ್ದರು.!

## ದಕ್ಷಿಣ ಕಾಶಿ ತಿಂಥಣಿ ಜಗದ್ಗುರು ಶ್ರೀ ಮೌನೇಶ್ವರ ದರ್ಶನ ಪಡೆದ ಸುರಪುರ ಶಾಸಕ



ಮಲ್ಲಮ್ಮ ನುಡಿ ವಾರ್ತೆ

ವೇಣುಗೋಪಾಲ್ ನಾಯಕ್.!

ಸುರಪುರ : ತಾಲೂಕಿನ ಸು–ಕ್ಷೇತ್ರ ದಕ್ಷಿಣ ಕಾಶಿ ತಿಂಥಣಿ ಜಗದ್ಗುರು ಶ್ರೀ ಮೌನೇಶ್ವರ ಜಾತ್ರಾಮಹೋತ್ಸವ ಅಂಗವಾಗಿ ಸುರಪುರ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸನ್ಮಾನ್ಯ ಶ್ರೀ ರಾಜಾ ವೇಣುಗೋಪಾಲ ನಾಯಕ ಧಣಿಯವರು ಭಾಗಿಯಾಗಿ. ಭಕ್ತರಲ್ಲಿ ಬುದ್ಧಿವಂತಿಕೆ,ಶಕ್ತಿ ಮತ್ತು ಧರ್ಮದ ಮಹತ್ವವನ್ನು ಜಾಗೃತಗೊಳಿಸುತ್ತಿರುವ ಜಗದ್ಗುರು ಮೌನೇಶ್ವರ ಪೂಜೆಯು ಜನರಿಗೆ ಸಮೃದ್ಧಿ ರಕ್ಷಣೆ ಮತ್ತು ಆಧ್ಯಾತ್ಮಿಕ ಬೆಳವಣಿಗೆಯೊಂದಿಭಗೆ ತಿಂಥಣಿ ಜಗದ್ಗುರು ಶ್ರೀ ಮೌನೇಶ್ವರ ಸ್ವಾಮಿಯ ಆಶೀರ್ವಾದ ಸದಾ ಎಲ್ಲರ ಮೇಲೆ ಇರಲಿ ಎಂದು ಬೇಡಿಕೊಂಡು ಆಶೀರ್ವಾದ ಪಡೆದರು.. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರು ಮತ್ತು ತಾಲೂಕು ದಂಡಾಧಿಕಾರಿಗಳು ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳು ಮತ್ತು ಊರಿನ ಎಲ್ಲಾ ಮುಖಂಡರುಗಳು ಉಪಸ್ಥಿತರಿದ್ದರು..!

# ಸತತ ಅಧ್ಯಯನ ಮೂಲಕ ಚುಟುಕು ಸಾಹಿತ್ಯದ ಶ್ರೀಮಂತಿಕೆ ಹೆಚ್ಚಿಸಲು ಬಡಿಗೇರ್ ಸಲಹೆ




ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :ಫೆ.10: ಚುಟುಕು ಸಾಹಿತ್ಯಕ್ಕೆ ಅಪಾರ ಮಹತ್ವ ಇದೆ ಉದಯೋನ್ಮುಖ ಸಾಹಿತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಚುಟುಕು ಸಾಹಿತ್ಯ ಅಧ್ಯಯನ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಲು ಪ್ರತ್ನಿಸಬೇಕೆಂದು ಹಿರಿಯ ಸಾಹಿತಿ ಶಿ.ಕಾ.ಬಡಿಗೇರ ಅಭಿಪ್ರಾಯ ಪಟ್ಟರು. ಅವರು ಭಾನುವಾರ ಸಮೀಪದ ಭಾಗ್ಯನಗರದಲ್ಲಿ ಕೊಪ್ಪಳ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಆಯೋಜಿಸಿದ್ದ ಉಪನ್ಯಾಸ ಮತ್ತು ಜಿಲ್ಲಾ ಮಟ್ಟದ ಮುಕ್ತ ಚುಟುಕು ಕವಿಗೋಷ್ಠಿ ಚುಟುಕು ವಾಚಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಹಿಂದೆ ಅಖಂಡ ರಾಯಚೂರು ಜಿಲ್ಲೆ ಇದ್ದಾಗ ಕೊಪ್ಪಳ ಜಿಲ್ಲೆಯ ಅನೇಕ ಸಾಹಿತ್ಯ ಆಸಕ್ತರು ಚುಟುಕು ಸಾಹಿತ್ಯ ಪರಿಷತ್ ಚಟುವಟಿಕೆಗಳನ್ನು ನಡೆಸಲು ಅವಕಾಶ ಬೆಳೆಸಿಕೊಂಡು ಬಂದಿದ್ದಾರೆ ಈಗಲೂ ಸಹ ಪರಿಷತ್ತಿನ ಅಧ್ಯಕ್ಷ ಹಾಗೂ ಪದಾಧಿಕಾರಿಗಳು ಅದರ ಕಾಯ9ಚಟುವಟಿಕೆಗಳನ್ನು ವಿಸ್ತರಣೆ ಅತ್ಯಂತ ಲವಲವಿಕೆಯಿಂದ ಆಯೋಜನೆ ಮಾಡುತ್ತಿರುವುದು ಸಾಹಿತಿಗಳ ಉತ್ಸಾಹ ತುಂಬುವ ನಿಟ್ಟಿನಲ್ಲಿ ಉತ್ತಮ ಬೆಳವಣಿಗೆ ಯುವ ಸಾಹಿತಿಗಳನ್ನು ಸಾಮಾಜಿಕ ಜವಾಬ್ದಾರಿ ವಹಿಸಿಕೊಳ್ಳುವ ನಿಟ್ಟಿನಲ್ಲಿ ಉತ್ತಮ ಸಂದೇಶ ಮೂಡಲಿ ಎಂದು ಆಶಿಸಿದರು. ತಾವು ಹಿಂದೆ ಒಂದು ಅವಧಿಯಲ್ಲಿ ಕೊಪ್ಪಳ ತಾಲ್ಲೂಕು ಅಧ್ಯಕ್ಷ ರಾಗಿ ತಾಲ್ಲೂಕು ಸಮ್ಮೇಳನ ಯಶಸಿಗೊಳಿಸಿದ ಸಂತೃಪ್ತಿ ಇದೆ, ಬರುವ ದಿನಗಳಲ್ಲಿ ಉತ್ತಮ ವೇದಿಕೇಕಲ್ಪಿಸುತ್ತ ಚುಟುಕು ಸಾಹಿತ್ಯ ಪರಿಷತ್ ಜನಪ್ರಿಯ ಗೊಳ್ಳಲಿ ಎಂದು ಹಾರೈಸಿದರು. ವಿಶೇಷ ಉಪನ್ಯಾಸ: ಕೊಪ್ಪಳ ಜಿಲ್ಲೆಯಲ್ಲಿ ಚುಟುಕು ಸಾಹಿತ್ಯ ಬೆಳೆದ ಬಂದ ದಾರಿ ಕುರಿತು ಶಿಕ್ಷಕ,ಸಾಹಿತಿ ಕಲ್ಲಪ್ಪ ಕವಳಕೇರಿ ಮಾತನಾಡಿ, ಜಿಲ್ಲೆಯಲ್ಲಿ ಚುಟುಕು ಸಾಹಿತ್ಯ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿರುವ ಮಹನೀಯರಲ್ಲಿ ಸಾಕಷ್ಟು ಜನ ಇದ್ದಾರೆ,ಗ್ರಾಮೀಣ ಭಾಗದಲ್ಲಿಯೂ ಸಹ ಸಾಹಿತ್ಯಕರ್ತಿಗೆ ತಾವು ಪ್ಯಾಂಟು ಶರ್ಟು , ಮಹಿಳೆಯರಿಗೆ ಸೀರೆ ವಿತರಿಸಿ ಸನ್ಮಾನ ಕಾರ್ಯಕ್ರಮ ಮಾಡಿದ ಉದಾಹರಣೆಗಳಿವೆ, ಸಾಹಿತ್ಯ ಆಸಕ್ತರ ಸಂಖ್ಯೆ ಕೊಪ್ಪಳ ಜಿಲ್ಲೆಯಲ್ಲಿ ಕ್ರಿಯಾಶೀಲರಾಗಿದ್ದಾರೆ, ಬಹಳಷ್ಟು ಕವಿಗಳು, ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡಿದ್ದಾರೆ, ಅನೇಕರು ಸಾಹಿತ್ಯಿಕವಾಗಿ ಮುಂಚೂಣಿಯಲ್ಲಿದ್ದಾರೆ,

ಇಂದಿನ ದಿನಗಳಲ್ಲಿ ಸಾಹಿತ್ಯ ದ ಬಗ್ಗೆ ಜನರಲ್ಲಿ ಆಸಕ್ತಿ ಕಡಿಮೆ ಯಾಗತ್ತಿರುವುದಕ್ಕೆ, ವಿಷಾದ ವ್ಯಕ್ತಪಡಿಸುತ್ತ , ಕನ್ನಡ ಭಾಷೆಯನ್ನು, ಕನ್ನಡ ಸಾಹಿತ್ಯವನ್ನು ನಾವೇ ಉಳಿಸಿ ಬೆಳೆಸುವ ಸಂಕಲ್ಪವನ್ನು ಮಾಡಬೇಕು,ಎಂದು ಹೇಳಿದರು. ವೇದಿಕೆಯಲ್ಲಿ ಉಪಸ್ಥಿತರಿದ್ದ ಬಾಳಪ್ಪ,ವೀರಾಪುರ ವಕೀಲರು, ಹಾಗೂ ಅಮಿನ ಸಾಹೇಬ ಮುಲ್ಲಾ ಅವರು, ಕನ್ನಡ ಭಾಷೆ ಅಭಿವೃದ್ಧಿಯಾಗ ಬೇಕಾದರೆ, ನಾವೆಲ್ಲರೂ ನಮ್ಮ ಮಾತೃಭಾಷೆಯನ್ನು ಪ್ರೀತಿಸಲೇ ಬೇಕು, ಎಲ್ಲಾ ಭಾಷೆಗಳನ್ನು ಗೌರವಿಸುತ್ತ, ನಮ್ಮ ಕನ್ನಡ ವನ್ನು ಬೆಳೆಸೋಣ,ಎಂದರು.

ಕೊಪ್ಪಳ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ರುದ್ರಪ್ಪ ಭಂಡಾರಿ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತ ಚುಟುಕು ಸಾಹಿತ್ಯ ಪರಿಷತ್ತಿನ ಕಾರ್ಯ ಕ್ರಮಗಳನ್ನು , ಗ್ರಾಮೀಣ ಪ್ರದೇಶಗಳಲ್ಲಿ ಹಮ್ಮಿಕೊಂಡು ಸಾಹಿತ್ಯದ ಸವಿಯನ್ನು ಎಲ್ಲೆಡೆಯೂ ಪಸರಿಸುವ ಕಾರ್ಯ ಮಾಡೋಣ,ಎಂದರು.

ಅಧ್ಯಕ್ಷತೆಯನ್ನು ವಹಿಸಿದ್ದ ಡಾ.ಮಹಾಂತೇಶ ನೆಲಾಗಣಿ ಅವರು , ಸಾಹಿತ್ಯ, ಸಾಂಸ್ಕೃತಿಕ , ಕಾರ್ಯಕ್ರಮಗಳು, ಹೆಚ್ಚು ಹೆಚ್ಚು,ನಡೆಯುವುದರಿಂದ, ಸಾಹಿತ್ಯವೂ ಬೆಳೆಯುತ್ತದೆ,ನಾವೂ ಬೆಳೆಯುತ್ತೇವೆ,ಎಂದು ಹೇಳಿದರು. ನಂತರ ನಡೆದ ಕವಿಗೋಷ್ಠಿ ಯಲ್ಲಿ ಹದಿನೈದಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಕವಿ/ಕವಿಯತ್ರಿ ಯರಾದ ಪುಷ್ಪಲತಾ ಯೋಳಭಾವಿ, ಎ.ಪಿ.ಅಂಗಡಿ, ವಿದ್ಯಾಶ್ರೀ ಹಿರೇಮಠ, ಅಕ್ಕಮಹಾದೇವಿ ಅಂಗಡಿ, ಈರಪ್ಪ ಬಿಜಲಿ, , ಬಾಳಪ್ಪ, ವೀರಾಪುರ,ಆನಂದ ಕಲಕ ಬಂಡಿ,ಅಮೀನ ಸಾಹೇಬ್ ಮುಲ್ಲಾ, ರವಿ ಹಿರೇಮನಿ, ಶಿವಪ್ರಸಾದ್ ಹಾದಿಮನಿ,ರವಿ ಸ್ವಾಮಿ ಹಿರೇಮಠ,ಮಹಾಲಕ್ಷ್ಮಿ,ಮುಂಡರಗಿ, ಮುಂತಾದವರು ಕವನ , ಚುಟುಕು ವಾಚನ ಮಾಡಿದರು. ಇದೇ ಸಂದರ್ಭದಲ್ಲಿ ಡಾ–ಕ್ಟರೇಟ್ ಪದವಿ ಪಡೆದ ಮಹಾಂತೇಶ ನೆಲಾಗಣಿ ಅವರನ್ನು, ಕವಿಯತ್ರಿ, ಶಿಕ್ಷಕಿ, ಶ್ರೀಮತಿ ವಿದ್ಯಾಶ್ರೀ ಹಿರೇಮಠ ದಂಪತಿಗಳು ಸನ್ಮಾನಿಸಿದರು. ಕಾರ್ಯಕ್ರಮದ ಆರಂಭದಲ್ಲಿ, ಕವಿಯತ್ರಿ ಅಕ್ಕಮಹಾದೇವಿ ಅಂಗಡಿ ಅವರು ಪ್ರಾರ್ಥಿಸಿದರು, ಕವಿ,ಉಪನ್ಯಾಸಕ ಶಿವಪ್ರಸಾದ್ ಹಾದಿಮನಿ ನಿರೂಪಿಸಿ, ವಂದಿಸಿದರು.

# ಕ್ರಿಕೆಟ್: ಟ್ರೋಫಿ ಗೆದ್ದ ಕಲಬುರಗಿ ಪತ್ರಕರ್ತರ ತಂಡ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಫೆ. 10 : ಇಲ್ಲಿಯ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಭಾನುವಾರ ನಡೆದ ಬೀದರ್ ಪ್ರಿಂಟ್ ಆಯಿಂಡ್ ಟಿವಿ ಮಿಡಿಯಾ ಟ್ರೋಫಿ–2025 ಕ್ರಿಕೆಟ್ ಟೂರ್ನಿಯಲ್ಲಿ ಕಲಬುರಗಿ ಪತ್ರಕರ್ತರ ಕ್ರಿಕೆಟ್ ತಂಡ ಟ್ರೋಫಿ ಗೆದ್ದುಕೊಂಡಿತು.

ಮೂರು ಪಂದ್ಯಗಳ ಸರಣಿಯಲ್ಲಿ ಎರಡು ಪಂದಗಳನ್ನು ಜಯಿಸಿ ಟ್ರೋಫಿ ಮುಡಿಗೇರಿಸಿಕೊಂಡಿತು.

ಮೊದಲ ಪಂದ್ಯ ಕಲಬುರಗಿ ಪತ್ರಕರ್ತರ ತಂಡ ಹಾಗೂ ಎರಡನೇ ಪಂದ್ಯ ಬೀದರ್ ಪತ್ರಕರ್ತರ ಕ್ರಿಕೆಟ್ ತಂಡ ಜಯಿಸಿದ್ದರಿಂದ ಮೂರನೇ ಪಂದ್ಯ ತೀವ್ರ ಕುತೂಹಲ ಕೆರಳಿತು. ರೋಚಕತೆಯಿಂದ ಕೂಡಿದ 6 ಓವರ್‌ಗಳ ನಿರ್ಣಾಯಕ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಬೀದರ್ ಪತ್ರಕರ್ತರ ತಂಡ ನಿಗದಿತ ಓವರ್‌ಗಳಲ್ಲಿ 8 ವಿಕೇಟ್ ಕಳೆದುಕೊಂಡು 33 ರನ್ ಗಳಿಸಿತು. ಕಲಬುರಗಿ ಪತ್ರಕರ್ತರ ತಂಡ 4.1 ಓವರ್‌ಗಳಲ್ಲಿ ಎರಡು ವಿಕೇಟ್ ನಷ್ಟಕ್ಕೆ 38 ರನ್ ಗಳಿಸಿ ಗೆಲುವಿನ ನಗೆ ಬೀರಿತು.



ಬೀದರ್ ನಲ್ಲಿ ನಡೆದ ಬೀದರ್ ಪ್ರಿಂಟ್ ಆಯಿಂಡ್ ಟಿವಿ ಮಿಡಿಯಾ ಟ್ರೋಫಿ–2025 ಕ್ರಿಕೆಟ್ ಟೂರ್ನಿಯಲ್ಲಿ ವಿಜೇತ ಕಲಬುರಗಿ ಪತ್ರಕರ್ತರ ಕ್ರಿಕೆಟ್ ತಂಡಕ್ಕೆ ಡಿ.ಆರ್. ಡಿವೈಎ???ಪಿ ಸುನೀಲ್ ಕೂಡ್ಲಿ ಹಾಗೂ ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಾಬುವಾಲಿ ಟ್ರೋಫಿ ಪ್ರದಾನ ಮಾಡಿದರು.

ವಿಜೇತ ಹಾಗೂ ರನ್ನರ್ ಅಪ್ ತಂಡಗಳಿಗೆ ಡಿ.ಆರ್. ಡಿವೈಎಸ್‌ಪಿ ಸುನೀಲ್ ಕೂಡ್ಲಿ ಹಾಗೂ ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಾಬುವಾಲಿ ಟ್ರೋಫಿ ಪ್ರದಾನ ಮಾಡಿದರು. ಸಂಜು ರಾಠೋಡ್ ಉತ್ತಮ ಆಲ್‌ರೌಂಡರ್, ಸಂಜು ಅಡಸಾರೆ ಉತ್ತಮ ಬ್ಯಾಟ್ಸ್‌ಮನ್ ಹಾಗೂ ಸಂಜು ರಾಠೋಡ್ ಉತ್ತಮ ಬೌಲರ್ ಪ್ರಶಸ್ತಿಗೆ ಭಾಜನರಾದರು.

ಬೀದರ್ ಪತ್ರಕರ್ತರ ತಂಡಕ್ಕೆ ಹಿರಿಯ ಪತ್ರಕರ್ತ ಅಪ್ಪರಾವ್ ಸೌದಿ ಮಾರ್ಗದರ್ಶಕರಾಗಿದ್ದರು. ಬಸವರಾಜ, ಅಮಜದ್ ಅಂಪೈರ್ ಹಾಗೂ ವಿನಾಯಕ್ ಕುಲಕರ್ಣಿ ಸ್ಕೋರರ್ ಆಗಿ ಕಾರ್ಯ ನಿರ್ವಹಿಸಿದರು.

ಕಲಬುರಗಿ ಪತ್ರಕರ್ತರ ಕ್ರಿಕೆಟ್ ತಂಡದ ನಾಯಕ ಪ್ರವೀಣ್ ರೆಡ್ಡಿ, ಬೀದರ್ ಪತ್ರಕರ್ತರ ಕ್ರಿಕೆಟ್ ತಂಡದ ನಾಯಕ ಮಲ್ಲಿಕಾರ್ಜುನ ಮರಕಲೆ, ಪತ್ರಕರ್ತರಾದ ವಿಜಯಕುಮಾರ ಬೆಲ್ದೆ, ಶಶಿಕಾಂತ ಬಂಬುಳಗೆ, ಮಾಳಪ್ಪ ಅಡಸಾರೆ,

ರಾಜಕುಮಾರ ಸ್ವಾಮಿ, ಸುರೇಶ್ ನಾಯಕ್, ಮಲ್ಲಿಕಾರ್ಜುನ ನಾಗರಾಳೆ, ನಂದಕುಮಾರ ಕರಂಜೆ, ದುರ್ಗಪ್ಪ ಹೊಸಮನಿ, ಸಂಜು ಅಡಸಾರೆ, ಲಿಂಗೇಶ್ ಮರಕಲೆ, ವಿಶ್ವ ವಡಗಾಂವ್, ಕಲಬುರಗಿಯ ಅರುಣ, ವಿಶ್ವ, ಸಂಜು, ಅಮಜದ್, ಪುರುಷೋತ್ತಮ, ಅನಿಲ್ ಸ್ವಾಮಿ, ರಾಧಾಕೃಷ್ಣ ಮತ್ತಿತರರು ಇದ್ದರು.

ಬೆಳಿಗ್ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಟೂರ್ನಿಗೆ ಚಾಲನೆ ನೀಡಿದರು.

ಬೀದರ್ ಪತ್ರಕರ್ತರವತಿಯಿಂದ ಟೂರ್ನಿ ಸಂಘಟಿಸಲಾಗಿತ್ತು.

## ಬೀದರ ದಿಂದ ಕುಂಭಮೇಳಕ್ಕೆ ತರೆಳುವ ಯಾತ್ರಿಗಳಿಗೆ ಈಶ್ವರಸಿಂಗ ಠಾಕೂರ ಚಾಲನೆ



ಬೀದರ. ಫೆ.10 : ಪ್ರಯಾಗ್ ರಾಜ್ ನಲ್ಲಿ ನಡೆಯುವ ಮಹಾ ಕುಂಭಮೇಳಕ್ಕೆ ಬೀದರ ನಗರದ ಚೌಬಾರಾ ದಿಂದ ಎರಡು ಬಸ್ಸುಗಳು ಸುಮಾರು 84 ಯಾತ್ರಿಕರು ಪ್ರಯಾಗರಾಜ ಗಂಗಾ ಸ್ನಾನಕ್ಕಾಗಿ ಪ್ರಯಾಣ ಬೆಳೆಸಿದರು. ಈ ಯಾತ್ರೆಯು ಸತೀಶ ನಾಗವಂಶಿ ಅವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಬೀದರ್ ಕ್ಷೇತ್ರದ ಬಿಜೆಪಿ ನಾಯಕರಾದ ಈಶ್ವರಸಿಂಗ ಠಾಕೂರ ಅವರು ಧ್ವಜವನ್ನು ತೋರಿಸುವ ಮುಖಾಂತರ ಯಾತ್ರೆಗೆ ಚಾಲನೆಯನ್ನು ನೀಡಿದರು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಮಹೇಶ್ವರ ಸ್ವಾಮಿ, ಕ್ಷತ್ರಿಯ ಸಮಾಜದ ಪ್ರಮುಖರಾದ ಮುಕೇಶ್ ನಂದಗಾವಳಿ, ಬಿಜೆಪಿ ಮುಖಂಡರಾದ ಸಂಜು ಕುಮಾರ್ ಘನಾತೆ, ಪ್ರಕಾಶ್ ಹಾಗೂ ಅನೇಕ ಜನ ಉಪಸ್ಥಿತರಿದ್ದರು.

## ಶರಣರಿಗೆ ಕಾಯಕವೇ ಜೀವಾಳವಾಗಿತ್ತು : ಸುರೇಖಾ ಕೆ.ಎ.ಎಸ್.



ಮಲ್ಲಮ್ಮ ನುಡಿ ವಾರ್ತೆ

ಬೀದರ: ಫೆ.10: ಸಮಾಜದಲ್ಲಿ ಕಾಯಕನಿಷ್ಠೆಯ ಆದರ್ಶವನ್ನು ತಿಳಿಸಿಕೊಟ್ಟವರು ಶರಣ–ರು. ತಮ್ಮ ಕಾಯ ಹಾಗೂ ಕಾಯಕದಲ್ಲಿಯೇ ಕೈಲಾಸವನ್ನು ಕಂಡು ಬಾಳಿದ ಮಹಾನುಭಾವರು ಬಸವಾದಿ ಶರಣರು ಎಂದು ಬೀದರ ವಿಶ್ವವಿದ್ಯಾಲಯದ ಆಡಳಿತ ಕುಲಸಚಿವರಾದ ಸುರೇಖಾ ಕೆ.ಎ.ಎಸ್. ಅವರು ಹೇಳಿದರು.

ಅವರು ಇಂದು ಬೀದರ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕಾಯಕ ಶರಣರ ಜಯಂತಿಯ ಕಾರ್ಯಕ್ರಮದಲ್ಲಿ ಪೂಜೆ ಸಲ್ಲಿಸಿ ಮಾತನಾಡಿದರು.

ವೃತ್ತಿ ಮನುಷ್ಯನಿಗೆ ಶೋಭೆ, ಗೌರವ ತರುತ್ತದೆ. ಸತ್ಕರ್ಮದ ಕಾಯಕದಿಂದ ವ್ಯಕ್ತಿ ಉದಾತ್ತನಾಗುತ್ತಾನೆ. ಜೀವನದಲ್ಲಿ ಸದಾ ಕಾಯಕನಿರತರಾಗಬೇಕೆಂಬುದು ಶರಣರ ಧ್ಯೇಯ ಹಾಗೂ ಆದರ್ಶವಾಗಿತ್ತು. ಯಾವ ಕಾಯಕವೂ ದೊಡ್ಡದಲ್ಲ, ಚಿಕ್ಕದಲ್ಲ. ಮನಸ್ಸಿನಿಂದ ಮಾಡುವ ಕಾಯಕವೇ ದೊಡ್ಡದೆಂದು ನಂಬಿದವರು ಶರಣರು. ಮಾದಾರ ಚನ್ನಯ್ಯ, ಸಮಗಾರ ಹರಳಯ್ಯ, ಡೋಹರ ಕಕ್ಕಯ್ಯ, ಉರಿಲಿಂಗ ಪೆದ್ದಿ, ಮಾದಾರ ಧೂಳಯ್ಯರವರಂತಹ ಮುಂತಾದ ಮಹಾನ್ ಶರಣರು ತಮ್ಮ ಕಾಯಕದ ಆದರ್ಶದಿಂದ ಸಮಾಜದ ಸ್ವಾಸ್ಥ್ಯವನ್ನು ಕಾಪಾಡಿದವರು. ಯಾರೂ ದುಡಿಯದೇ ಪ್ರಸಾದ ಸೇವಿಸಬಾರದೆಂಬ ಮೌಲ್ಯವನ್ನು 12ನೆಯ ಶತಮಾನದಲ್ಲಿಯೇ ಹೇಳಿದಂತಹ ಮಹನೀಯರಾಗಿದ್ದರೆಂದು ಕುಲಸಚಿವರು ಹೇಳಿದರು. ಸಮಾರಂಭದಲ್ಲಿ ಮೌಲ್ಯಮಾಪನ ಕುಲಸಚಿವರಾದ ಪ್ರೊ. ಪರಮೇಶ್ವರ ನಾಯ್ಕ. ಟಿರ ಅವರು ಮಾತನಾಡಿ, ಶರಣರು ತಾವು ಮಾಡುವ ಕಾಯಕನಿಷ್ಠೆ ಹಾಗೂ ತಮ್ಮ ವಚನಗಳಿಂದಲೇ ಇಂದಿಗೂ ಜೀವಂತವಾಗಿದ್ದಾರೆ, ಅಮರರಾಗಿದ್ದಾರೆ. ಶರಣರ ಸಮಾನತೆಯ ಸಿದ್ಧಾಂತ ಸಾರ್ವಕಾಲಿಕ ಮೌಲ್ಯವಾಗಿದೆ. ಶರಣರು ಎಲ್ಲರನ್ನೂ ಸಮಾನವಾಗಿ ಕಂಡರು. ಇವನಾರವನೆನ್ನದೆ, ಇವನಮ್ಮವನೆಂದರು. ಶರಣರು ಆರೋಗ್ಯಕರ ಸಮಾಜಕ್ಕಾಗಿ ಹಂಬಲಿಸಿದರು ಎಂದರು.

ಕನ್ನಡ ಉಪನ್ಯಾಸಕರಾದ ರಾಮಚಂದ್ರ ಗಣಾಪೂರ ಅವರು ಮಾತನಾಡಿ, ಶರಣ–ರು ಕಾಯಕ ಪರಂಪರೆಗೆ ಮೌಲ್ಯವನ್ನು, ಅರ್ಥವನ್ನು ತಂದುಕೊಟ್ಟವರು. ಆ ಮೂಲಕ ತಮ್ಮ ನಡೆ–ನುಡಿಯಿಂದ, ಕಾಯಕನಿಷ್ಠೆಯಿಂದ ಆರೋಗ್ಯಕರ ಸಮಾಜದ ನಿರ್ಮಾಣದಲ್ಲಿ ಮಹತ್ವದ ಕೊಡುಗೆಯನ್ನು ನೀಡಿದರು. ಶರಣರು ಮೊದಲು ನಡೆದರು, ನಂತರ ನುಡಿದರು. ಹೀಗಾಗಿ ನಮಗೆ ನಡೆನುಡಿಯ ಆದರ್ಶಗಳ ಅವಶ್ಯಕತೆಯಿದೆ ಎಂದರು. ಸಮಾರಂಭದಲ್ಲಿ ಬೀದರ ವಿಶ್ವವಿದ್ಯಾಲಯದ ಶಿಕ್ಷಕ, ಶಿಕ್ಷಕೇತರ ಸಿಬ್ಬಂದಿವರ್ಗದವರು ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಡಾ.ನಾಗಲಕ್ಷ್ಮೀ ಚೌಧರಿ ಅವರ ಬೀದರ ಜಿಲ್ಲಾ ಪ್ರವಾಸ

ಬೀದರ : ಫೆ.10: ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಡಾ.ನಾಗಲಕ್ಷ್ಮೀ ಚೌಧರಿ ಅವರು ಫೆಬ್ರುವರಿ.11 ರಂದು ಬೀದರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿರುತ್ತಾರೆ.

ಅವರು ಅಂದು ಬೆಳಿಗ್ಗೆ 10.30ಕ್ಕೆ ಬೀದರನ ಬಸವಗಿರಿ ಪಾಪನಾಶ ಹಿಂಭಾಗ, ಬಸವ ಸೇವಾ ಪ್ರತಿಷ್ಠಾನದ ವತಿಯಿಂದ ಹಮ್ಮಿಕೊಂಡಿರುವ ವಚನ ವಿಜಯೋತ್ಸವ ಕಾರ್ಯಕ್ರಮದಲ್ಲಿ ಸ್ತ್ರೀ ಶಕ್ತಿ ಸಮಾವೇಶ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 1.30ಕ್ಕೆ ಬೀದರ ಜಿಲ್ಲಾಸ್ಪತ್ರೆಗೆ ಭೇಟಿ ನೀಡಲಿದ್ದಾರೆ. ನಂತರ ಮಧ್ಯಾಹ್ನ 2.30 ಗಂಟೆಗೆ ಬೀದರನ ಮಹಿಳಾ ಪೊಲೀಸ್ ಠಾಣೆಗೆ ಭೇಟಿ ನೀಡಲಿದ್ದಾರೆ. ಸಂಜೆ 3.30 ಗಂಟೆಗೆ ಬೀದರನಿಂದ ನಿರ್ಗಮಿಸಲಿದ್ದಾರೆ ಎಂದು ಅಧ್ಯಕ್ಷರ ಅಪ್ತಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪಾಲಕರ ನಿರೀಕ್ಷೆ ಹುಸಿಗೊಳಿಸದಿರಿ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಫೆ. 10 : ಮಕ್ಕಳು ಪಾಲಕರ ನಿರೀಕ್ಷೆಗಳನ್ನು ಹುಸಿಗೊಳಿಸಬಾರದು ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಸುರೇಶ ಚನಶೆಟ್ಟಿ ಹೇಳಿದರು.

ಇಲ್ಲಿಯ ಕೆ.ಇ.ಬಿ. ಕಚೇರಿ ರಸ್ತೆಯಲ್ಲಿ ಇರುವ ಐ.ಎಂ.ಎ. ಹಾಲ್‌ನಲ್ಲಿ ಭಾನುವಾರ ನಡೆದ ವಚನ ವಿಜಯೋತ್ಸವ ಅಂಗವಾಗಿ ಬಸವ ಕಾಯಕ, ದಾಸೋಹ ಫೌಂಡೇಷನ್ ವತಿಯಿಂದ ಹಮ್ಮಿಕೊಂಡಿದ್ದ ಮೂರು ದಿನಗಳ ಕೌಶಲ ಅಭಿವೃದ್ಧಿ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಮಕ್ಕಳ ಭವಿಷ್ಯ ಉಜ್ವಲಗೊಳಿಸಲು ಪಾಲಕರು ಸಾಕಷ್ಟು ಕಷ್ಟ ಪಡುತ್ತಾರೆ. ಹೀಗಾಗಿ ಅವರ ಶ್ರಮ ವ್ಯರ್ಥಗೊಳಿಸಬಾರದು. ಮಕ್ಕಳು ಪಾಲಕರು ಹೆಮ್ಮೆ ಪಡುವಂಥ ಸಾಧನೆ ಮಾಡಬೇಕು. ತಮ್ಮ ತಪ್ಪಿಗಾಗಿ ಅವರು ತಲೆ ತಗ್ಗಿಸದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ಹಣ ಗಳಿಕೆಯೇ ಗುರಿಯಾಗಬಾರದು. ಉತ್ತಮ ನಡವಳಿಕೆ ರೂಢಿಸಿಕೊಳ್ಳಬೇಕು ಎಂದು ಹೇಳಿದರು.



ಬಸವ ಕಾಯಕ, ದಾಸೋಹ ಫೌಂಡೇಷನ್ ಜಿಲ್ಲೆಯಲ್ಲಿ ಸಾಮಾಜಿಕ ಚಟುವಟಿಕೆಗಳಲ್ಲಿ ನಿರತವಾಗಿದೆ. ಯುವ ಜನರಿಗೆ ನೆರವಾಗಲು ಫೌಂಡೇಷ???ನಿಂದ ಕೌಶಲ ಅಭಿವೃದ್ಧಿ ಕಾರ್ಯಾಗಾರ ಹಮ್ಮಿಕೊಂಡಿರುವುದು ಪ್ರಶಂಸನೀಯ ಎಂದರು.

ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಎಂಜಿನಿಯರ್ ಶಿವಶಂಕರ ಕಾಮಶೆಟ್ಟಿ ಮಾತನಾಡಿ, ಈಗ ಕೌಶಲಕ್ಕೆ ಬಹಳ ಮಹತ್ವ ಇದೆ. ಯುವಕರು ಕೌಶಲ ಬೆಳೆಸಿಕೊಳ್ಳಲು ಒತ್ತು ಕೊಡಬೇಕು ಎಂದು ತಿಳಿಸಿದರು.

ಬಸವ ಕಾಯಕ, ದಾಸೋಹ ಫೌಂಡೇಷನ್ ಅಧ್ಯಕ್ಷ ಬಸವರಾಜ ಧನ್ನೂರ ಮಾತನಾಡಿ, ಫೌಂಡೇಷನ್ ಬಸವಣ್ಣನವರ ತತ್ವದಡಿ ಕಾರ್ಯ ನಿರ್ವಹಿಸುತ್ತಿದೆ. ಬಸವ ತತ್ವದ ಪ್ರಚಾರದ ಜತೆಗೆ ಜನೋಪಯೋಗಿ ಕಾರ್ಯಗಳನ್ನು ಕೈಗೊಳ್ಳುತ್ತಿದೆ ಎಂದು ಹೇಳಿದರು.

ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯ, ಸಂಗೀತ, ಧಾರ್ಮಿಕ ಮೊದಲಾದ ಕ್ಷೇತ್ರಗಳಿಗೆ ತನ್ನದೇ ಆದ ಕೊಡುಗೆ ನೀಡುತ್ತ ಬಂದಿದೆ ಎಂದು ತಿಳಿಸಿದರು.

ಫೌಂಡೇಷನನಿಂದ ಈವರೆಗೆ 25 ಬಡ ವಿದ್ಯಾರ್ಥಿಗಳ ಶಿಕ್ಷಣ, 5 ಬಡ ಹೆಣ್ಣು ಮಕ್ಕಳ ಮದುವೆಗೆ ಧನ ಸಹಾಯ ಮಾಡಲಾಗಿದೆ. ಮೂರು ಗ್ರಂಥಗಳನ್ನು ಪ್ರಕಟಿಸಲಾಗಿದೆ. ಬಸವಣ್ಣನವರ ಒಂದು ಸಾವಿರ ವಚನ ಫಲಕಗಳನ್ನು ಮನೆ ಮನೆಗೆ ವಿತರಿಸಲಾಗಿದೆ ಎಂದು ಹೇಳಿದರು.

ಕಾರ್ಯಾಗಾರವನ್ನು ಅಚ್ಚುಕಟ್ಟಾಗಿ ಸಂಘಟಿಸಲಾಗಿತ್ತು. ವಿವಿಧ ಕೌಶಲಗಳನ್ನು ಅರಿಯಲು ಸಹಕಾರಿಯಾಯಿತು ಎಂದು ವಿದ್ಯಾರ್ಥಿಗಳು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ಡಿ.ಬಿ. ಸನ್ ಸಂಸ್ಥೆಯ ಸಂಪನ್ಮೂಲ ವ್ಯಕ್ತಿ ಶಿವಾನಂದ ಡಿ.ವಿ. 'ಎಲೆಕ್ಟ್ರಿಕಲ್ ಸ್ವಿಚ್ ಗೇರ್ ಮತ್ತು ಅದರ ಅನ್ವಯಗಳು' ಕುರಿತು ತರಬೇತಿ ನೀಡಿದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಸೋಮಶೇಖರ ಬಿರಾದಾರ ಚಿದ್ರಿ ಹಾಗೂ ಪ್ರಧಾನ ಕಾರ್ಯದರ್ಶಿ ಪ್ರಭುಲಿಂಗ ತೂಗಾವೆ ಅವರನ್ನು ಸನ್ಮಾನಿಸಲಾಯಿತು. ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಏಳು ಕಾಲೇಜುಗಳ 70 ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ರಾಜೇಂದ್ರಕುಮಾರ ಗಂದಗೆ, ಕೆ.ಆರ್.ಇ. ಸಂಸ್ಥೆಯ ನಿರ್ದೇಶಕ ವೀರಭದ್ರಪ್ಪ ಬುಯ್ಯಾ, ರೋಟರಿ ಕ್ಲಬ್ ಬೀದರ್ ಅಧ್ಯಕ್ಷ ಸೋಮಶೇಖರ ಪಾಟೀಲ, ರೋಟರಿ ಕ್ಲಬ್ ಬೀದರ್ ಫೋರ್ಟ್ ಅಧ್ಯಕ್ಷ ಗುಂಡಪ್ಪ ಘೋಡೆ, ರೋಟರಿ ಕ್ಲಬ್ ಆಫ್ ಬೀದರ್ ನ್ಯೂ ಸೆಂಚುರಿ ಅಧ್ಯಕ್ಷ ಶಿವಕುಮಾರ ಪಾಖಾಲ್, ರೋಟರಿ ಕ್ಲಬ್ ಹುಮನಾಬಾದ್ ಇಲೈಟ್ ಅಧ್ಯಕ್ಷ ನಾಗರಾಜ ಕರ್ಪೂರ, ನಿವೃತ್ತ ಕಾರ್ಯನಿರ್ವಾಹಕ ಎಂಜಿನಿಯರಗಳಾದ ಚಂದ್ರಕಾಂತ ಮಿರ್ಚೆ, ಗುಂಡಪ್ಪ ಬಳತೆ, ಬೀದರ್ ಚೆಸ್ ಅಸೋಸಿಯೇಷನ್ ಅಧ್ಯಕ್ಷ ನಿತಿನ್ ಕರ್ಪೂರ ಉಪಸ್ಥಿತರಿದ್ದರು.

ಸ್ಫೂರ್ತಿ ಧನ್ನೂರ ಸ್ವಾಗತಿಸಿದರು. ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ನಿವೃತ್ತ ಪ್ರಾಚಾರ್ಯ ಶಿವಶಂಕರ ಟೋಕರೆ ನಿರೂಪಿಸಿದರು. ಫೌಂಡೇಷನ್ ಕಾರ್ಯದರ್ಶಿ ಸುವರ್ಣಾ ಧನ್ನೂರ ವಂದಿಸಿದರು.

## ಸ್ವಪ್ರೇರಣೆಯಿಂದ ಅದ್ಭುತ ಕಾರ್ಯಸಿದ್ಧಿ ಪ್ರಾಪ್ತ :ಹಾರಕೂಡ ಶ್ರೀ



ಮಲ್ಲಮ್ಮ ನುಡಿ ವಾರ್ತೆ.

ಬಸವಕಲ್ಯಾಣ :– ಫೆ. 10. ಸ್ವಪ್ರೇರಣೆಯಿಂದ ಅದ್ಭುತ ಕಾರ್ಯಸಿದ್ಧಿ ಪ್ರಾಪ್ತವಾಗುತ್ತದೆ.

ನಮ್ಮಲ್ಲಿ ಉತ್ಸಾಹದ ಗಂಗೆ ಹರಿದಷ್ಟು ಜಟಿಲ ಕಾರ್ಯಗಳೂ ಸರಳವಾಗಿ ಮಾರ್ಪಡುತ್ತವೆ ಎಂದು ಹಾರಕೂಡದ ಡಾ. ಚನ್ನವೀರ ಶಿವಾಚಾರ್ಯರು ನುಡಿದರು.

ತಾಲೂಕಿನ ಹಾರಕೂಡ ಶ್ರೀಮಠದಲ್ಲಿ ಹಾರಕೂಡ ದೇಗಾಂವ ಪರಿವಾರದ ಹೆಣ್ಣು ಮಕ್ಕಳಿಂದ ಆಯೋಜಿಸಿದ ಗುರುವಂದನೆ ಹಾಗೂ 763ನೇ ತುಲಾಭಾರ ಸಮಾರಂಭದ ಪಾವನ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು ಯಾವುದೇ ಸಂದರ್ಭದಲ್ಲಿ ಜೀವನೋತ್ಸವ ಕಳೆದುಕೊಳ್ಳಬಾರದು, ಜಟಿಲ ಸನ್ನಿವೇಶಗಳ ಸಂದರ್ಭದಲ್ಲೂ ಸಮಚಿತ್ತದ ಭಾವಾನಂದ, ಮುಖದ ಮಂದಹಾಸ ಬಾಡದಂತೆ ಚೇತೋಹಾರಿಯಾಗಿರಬೇಕಾರೆ ಗುರುವಿನ ಕೃಪಾ ಹಸ್ತಕ್ಕೆ ಪಾತ್ರರಾಗಿರಬೇಕು.

ಗುರುವಾಣಿಯನ್ನು ಬದ್ಧತೆಯಿಂದ ಪಾಲಿಸಿದ ಕುಟುಂಬ, ಸಮಾಜ, ಶಾಂತಿ ನೆಮ್ಮದಿಯಿಂದ ಇರಲು ಸಾಧ್ಯವಾಗುತ್ತದೆ.

ಒಬ್ಬ ಸಮರ್ಥ ಗ್ರಹಣಿ ಆ ಕುಟುಂಬದ ವಿಕಾಸಕ್ಕೆ ಪ್ರೇರಣಯ ಗಣಿಯಾಗಿರುತ್ತಾಳೆ, ಹಾಗಾಗಿ ಮಹಿಳೆಯನ್ನು ಗೌರವದಿಂದ ಕಾಣುವುದು ಪುರುಷವರ್ಗದ ಆದ್ಯ ಹೊಣೆಯಾಗಿದೆ.

ಹಾರಕೂಡ ದೇಗಾಂವ ಪರಿವಾರದ ಹೆಣ್ಣು ಮಕ್ಕಳು ಮಾಡಿದ ಗುರು ವಂದನೆ ಅವರ ಇಡೀ ಬದುಕಿನಲ್ಲಿ ಶ್ರೇಯಸ್ಸಿನ ಹೊಳೆ ತುಂಬಿ ಹರಿಯಲಿ, ಹಾರಕೂಡಧೀಶನ ಕೃಪಾರಕ್ಷೆ ಕಾಪಾಡುವಂತಾಗಲಿ ಎಂದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಮಲ್ಲಿನಾಥ ಹಿರೇಮಠ ಹಾರಕೂಡ. ಅಪ್ಪಣ್ಣ ಜನವಾಡ. ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಬಸವಕಲ್ಯಾಣ ಪಿಎಲ್ ಡಿ ಬ್ಯಾಂಕ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ, ಮಹಾದೇವರಡ್ಡಿ ಮಲರಡ್ಡಿ ನರಹರೆ. ಅಧ್ಯಕ್ಷರು, ಮಾಣಿಕ ತಿಪಗಪಣ್ಣ ಸಾಗ್ರೆ. ಉಪಾಧ್ಯಕ್ಷ, ಶಾಸಕ ಶರಣು ಸಲಗರ ರವರು ಅವರಿಗೆ ಶುಭ ಹಾರೈಸಿದ್ದಾರೆ. ಈ ಸಂದರ್ಬದಲ್ಲಿ ಜ್ಞಾನದೇವ ರಡ್ಡಿ, ಹಣಮಂತವಾಡಿ ಸೇರಿದಂತೆ ಇತರರಿದ್ದರು.

## ಇಂದು ವಿವಿಧ ಮಾರ್ಗಗಳಲ್ಲಿ ವಿದ್ಯುತ್ ವ್ಯತ್ಯಯ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :ಫೆ.10: 110 ಕೆ.ವಿ ಕೊಪ್ಪಳ ಸ್ಟೇಷನ್‌ನ ತುರ್ತು ನಿರ್ವಹಣೆ ಕಾಮಗಾರಿ (ಮೆಂಟೆನೆನ್ಸ್) ನಡೆಸುತ್ತಿರುವ ಪ್ರಯುಕ್ತ ಫೆಬ್ರವರಿ 11 ರಂದು ವಿವಿಧ ಮಾರ್ಗಗಳಿಗೆ ವಿದ್ಯುತ್ ವ್ಯತ್ಯಯವಾಗಲಿದೆ.

110 ಕೆ.ವಿ ಕೊಪ್ಪಳ ಸ್ಟೇಷನ್‌ಗೆ ಒಳಪಡುವ ಎಫ್–10 ಗವಿಮಠ ಹಾಗೂ ಎಫ್–2 ಕೆ.ಡಬ್ಲ್ಯೂ. ಎಸ್ ಫೀಡರ್‌ಗೆ ಸಂಬಂಧಿಸಿದ ಕುವೆಂಪುನಗರ, ಜಿಲ್ಲಾ ಜೈಲುಖಾನೆ, ಶಫಿ ಗಾರ್ಮೆಂಟ್ಸ್, ಹೂವಿನಾಳ ರಸ್ತೆ ಹಾಗೂ ಹಾಲವರ್ತಿ ರಸ್ತೆಯ ಎಲ್ಲಾ ಶೆಂಗಾ ಮಿಲ್‌ಗಳು ಮತ್ತು ಗವಿಮಠ ಯಾತ್ರಿನಿವಾಸ, ಈ ಎಲ್ಲಾ 11 ಕೆವಿ ಲೈನ್‌ಗಳು ಫೆ. 11ರ ಬೆಳಿಗ್ಗೆ 10 ಗಂಟೆಯಿಂದ ಸಾಯಂಕಾಲ 4 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿವೆ.

ವಿದ್ಯುತ್ ತುರ್ತು ನಿರ್ವಹಣೆ ಕೆಲಸವು ಬೇಗನೆ ಮುಕ್ತಾಯಗೊಂಡಲ್ಲಿ, ಯಾವುದೇ ಸಮಯದಲ್ಲಿ ವಿದ್ಯುತ್ ಸರಬರಾಜು ಮಾಡಲಾಗುವುದು. ಆದ್ದರಿಂದ ಸಾರ್ವಜನಿಕರು ಯಾವುದೇ ತರಹದ ವಿದ್ಯುತ್ ದುರಸ್ಥಿ ಕೆಲಸ–ಕಾರ್ಯಗಳನ್ನು ಕೈಗೊಳ್ಳಬಾರದು. ಒಂದು ವೇಳೆ ವಿದ್ಯುತ್ ಅಘಘಾತ ಸಂಬವಿಸಿದ್ದಲ್ಲಿ ಕಂಪನಿಯು ಜವಾಬ್ದಾರರಾಗಿರುವುದಿಲ್ಲ ಎಂದು ಕೊಪ್ಪಳ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ–ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಾಯಕ ಶರಣರ ಆದರ್ಶ ಜೀವನ ಮಾದರಿ: ಮುಂಡರಗಿ ನಾಗರಾಜ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಫೆ.10:ಕಾಯಕ ಶರಣರ ವಚನಗಳು ಇಂದಿನ ಆಧುನಿಕ ಯುಗಕ್ಕೂ ಪ್ರಸ್ತುತವಾಗಿದ್ದು, ಇಂದಿನ ಯುವ ಪೀಳಿಗೆಯು ಅವರ ಆದರ್ಶಗಳನ್ನು ಪಾಲಿಸಿ ಮುನ್ನಡೆಯಬೇಕಿದೆ ಎಂದು ಡಾ.ಬಾಬು ಜಗಜೀವನರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ ಅವರು ಹೇಳಿದರು.

ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮದಿರದ ವೇದಿಕೆ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಿದ್ದ ಕಾಯಕ ಶರಣರಾದ ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಮಾದಾರ ದೂಳಯ್ಯ, ಉರಿಲಿಂಗ ಪೆದ್ದಿ ಅವರ ಜಯಂತಿ ಕಾರ್ಯಕ್ರಮವನ್ನು ಕಾಯಕ ಶರಣರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

12 ನೇ ಶತಮಾನದಲ್ಲಿನ ಶಿವಶರಣರು, ಯಾವುದೇ ಕಾಯಕವೂ ಮೇಲಲ್ಲ ಮತ್ತು ಕೀಳಲ್ಲ ಎಂಬ ಮನೋಧೋರಣೆಯಿಂದ ಕಾಯಕ ಮಾಡಿ ದೇವರನ್ನು ಒಲಿಸಿಕೊಂಡ ಶರಣರು ಇವರು ಎಂದು ತಿಳಿಸಿದರು.

ಬಸವಣ್ಣನವರ ಅನುಭವ ಮಂಟಪದಲ್ಲಿ ಎಲ್ಲ ವರ್ಗದ ಶರಣರಿದ್ದರು. ಅವರಲ್ಲಿ ಮಾದಾರ ಚನ್ನಯ್ಯ, ಮಾದಾರ ಧೂಳಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಉರಿಲಿಂಗಿಪೆದ್ದಿ ಎಂಬ ಐವರು ಕಾಯಕ ಶರಣರು ಪ್ರಮುಖ ಹಿರಿಯ ಶರಣರಾಗಿದ್ದರು ಎಂದರು.

ವಿವಿಧ ಜಿಲ್ಲೆಗಳಲ್ಲಿ ಈ ಕಾಯಕ ಶರಣರ ಮಠಗಳು ಇಂದಿಗೂ ಇವೆ. ಅವರ ಜೀವನ ಹಾಗೂ ಮೌಲ್ಯಗಳನ್ನು ಸಮಾಜಕ್ಕೆ ಬಿತ್ತರಿಸುವ ನಿಟ್ಟಿನಲ್ಲಿ ಸರ್ಕಾರ ಜಯಂತಿ ಆಚರಣೆ ಮಾಡುತ್ತಿದೆ. ವಿದ್ಯಾರ್ಥಿಗಳು ಮೊಬೈಲ್ ಬಳಕೆ ಮಾಡುವುದನ್ನು ಕಡಿಮೆ ಮಾಡಿ ಓದಿನ ಕಡೆ ಗಮನ ಕೊಡಬೇಕು. ಪುಸ್ತಕಗಳನ್ನು ಹೆಚ್ಚು ಹೆಚ್ಚು ಅಧ್ಯಯನ ಮಾಡಬೇಕು ಎಂದರು.

ವಿಶೇಷ ಉಪನ್ಯಾಸಕರಾಗಿ ಆಗಮಿಸಿದ್ದ ಸಂಗನಕಲ್ಲಿನ ನಿವೃತ್ತ ಪ್ರಾಧ್ಯಾಪಕರಾದ ಶ್ರೀನಿವಾಸಮೂರ್ತಿ ಅವರು ಸಂವಿಧಾನದ ಪೀಠಿಕೆ ಪ್ರತಿಜ್ಞೆ ಭೋದಿಸಿ ಮಾತನಾಡಿ, 12ನೇ ಶತಮಾನದಲ್ಲಿ ವಚನಗಳು ಮತ್ತು ಬುದ್ದನ ಕಾಲದಲ್ಲಿ ತ್ರಿಪಿಟಕಗಳೇ ಸಂವಿಧಾನವಾಗಿತ್ತು ಎಂದರು.

ಕಾಯಕಶರಣರು ತಮ್ಮ ವಚನಗಳ ಮೂಲಕ ಸಮಾಜದಲ್ಲಿರುವ ಕಂದಾಚಾರ, ಜಾತಿಪದ್ಧತಿಗಳನ್ನು ಹೋಗಲಾಡಿಸುತ್ತಿದ್ದರು. ಸಮ ಸಮಾಜ ನಿರ್ಮಾಣಕ್ಕಾಗಿ ಶರಣರ ವಚನಗಳನ್ನು ಅಧ್ಯಯನ ಮಾಡುವುದು ಈ ಸಂದರ್ಭದಲ್ಲಿ ಅಗತ್ಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಮತ್ತೋರ್ವ ವಿಶೇಷ ಉಪನ್ಯಾಸಕರಾಗಿ ಆಗಮಿಸಿದ್ದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಉಪನ್ಯಾಸಕರಾದ ಶಾಮಣ್ಣ ಅವರು ಮಾತನಾಡಿ, 12ನೇ ಶತಮಾನದಲ್ಲಿದ್ದ ಶರಣರು ಸಮಾಜದಲ್ಲಿದ್ದ ಅಂಕುಡೊಂಕುಗಳ ಕುರಿತು ಸರಳ ಭಾಷೆಯ ಮೂಲಕ ಸಾಮಾನ್ಯ ಜನರಿಗೆ ತಿಳಿಸುವ ಕಾರ್ಯ ಮಾಡುತ್ತಿದರು ಎಂದು ತಿಳಿಸಿದರು.

ನಾವೀಗ ಸದೃಢ ಭಾರತ ಕಟ್ಟಬೇಕಿದೆ. ಭಾರತ ಸಂವಿಧಾನ ಮಹತ್ತರವಾದದ್ದು, ಸಮ ಸಮಾಜ ನಿರ್ಮಾಣಕ್ಕಾಗಿ ಶರಣರ ವಚನಗಳನ್ನು ಈಗಿನ ವಿದ್ಯಾರ್ಥಿಗಳು ಅಧ್ಯಯನ ಮಾಡಬೇಕು. ಆಗ ಮಾತ್ರ ಪರಿಪೂರ್ಣ ವ್ಯಕ್ತಿತ್ವ ನಿರ್ಮಾಣವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಿರುಗುಪ್ಪದ ದಳವಾಯಿ ಅಂಬಣ್ಣ ಅವರ ಸಂಗಡಿಗರಿಂದ ಶರಣರ ವಚನ ಗಾಯನಗಳನ್ನು ಪ್ರಸ್ತುತ ಪಡಿಸಿದರು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಬಿ.ನಾಗರಾಜ್,

ಹಿರಿಯಸಾಹಿತಿ ಎನ್.ಡಿ.ವೆಂಕಮ್ಮ ಸೇರಿದಂತೆ ಇಲಾಖೆಯ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿ, ವಿದ್ಯಾರ್ಥಿನಿಯರು ಹಾಗೂ ಇತರರು ಉಪಸ್ಥಿತರಿದ್ದರು.

# ಆನೆಕಾಲು ರೋಗ ನಿವಾರಣೆಗೆ ಅರ್ಹರು ತಪ್ಪದೆ ಮಾತ್ರೆ ಪಡೆಯಿರಿ:ಶಾಸಕ ಚನ್ನಾರೆಡ್ಡಿ ಪಾಟೀಲ್( ತುನ್ನೂರ್)




ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ಫೆ:10: ಇಂದಿನಿಂದ ಫೆಬ್ರವರಿ 28 ರವರೆಗೆ ಆನೆಕಾಲು ರೋಗ ನಿವಾರಣೆಗಾಗಿ ಜಿಲ್ಲೆಯ ವಡಗೇರಾ ಬ್ಲಾಕ್ ನಲ್ಲಿ ಸಾಮೂಹಿಕ ಔಷಧಿ ನುಂಗಿಸುವ (ಕಾರ್ಯಕ್ರಮ) ಹಮ್ಮಿಕೊಂಡಿದ್ದು, ಮುನ್ನೆಚ್ಚರಿಕೆಯಾಗಿ ಅರ್ಹರು ತಪ್ಪದೆ ನಿಗದಿತ ಮಾತ್ರೆ ಪಡೆಯುವಂತೆ ನಗರ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ್ ಅವರು ಹೇಳಿದರು.

ಆನೆಕಾಲು ರೋಗ ನಿವಾರಣೆಗೆ ಸಂಬಂಧಿಸಿದಂತೆ ವಡಗೇರಾ ಬ್ಲಾಕ್ ನಲ್ಲಿ ಸಾಮೂಹಿಕ ಔಷಧಿ ನುಂಗಿಸುವ ಕಾರ್ಯಕ್ರಮದ ಅಂಗವಾಗಿ ನಾಯ್ಕಲ್ ಗ್ರಾಮ ಪಂಚಾಯತ್ ಆವರಣದಲ್ಲಿ ಇಂದು ಶಾಲಾ ಮಕ್ಕಳಿಗೆ ನಿಗದಿತ ಮಾತ್ರೆ ನುಂಗಿಸಿ, ತಾವೂ ನುಂಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಆನೆಕಾಲು ರೋಗ ಸೋಂಕಿತ ಕ್ಯೂಲೆಕ್ಸ ಸೊಳ್ಳೆಗಳು ಕಚ್ಚುವುದರಿಂದ ಒಬ್ಬರಿಂದ ಇನ್ನೊಬ್ಬರಿಗೆ ಹರಡುತ್ತದೆ. ಒಮ್ಮೆ ಈ ರೋಗ ಬಂದಲ್ಲಿ ಗುಣಮುಖ ಕಷ್ಟಸಾಧ್ಯ, ಕಾರಣ ವರ್ಷಕ್ಕೊಮ್ಮೆ ಉಚಿತವಾಗಿ ಐವರ್ ಮೆಕ್ಟಿನ್, ಡಿ.ಇ.ಸಿ, ಆಲ್ಬೆಂಡಜೋಲ್, ತ್ರಿವಳಿ ಗುಳಿಗೆಗಳನ್ನು ನೀಡಲಾಗುತ್ತಿದ್ದು, ಪ್ರತಿ ಕುಟುಂಬದ ಅರ್ಹ ಸದಸ್ಯರು ತಪ್ಪದೆ ಮಾರ್ಗಸೂಚಿ ಅನ್ವಯ ಮಾತ್ರೆಗಳನ್ನು ನುಂಗಬೇಕು ಎಂದು ಹೇಳಿದರು.

ಇದರಿಂದ ಯಾವುದೇ ರೀತಿಯ ಅಡ್ಡ ಪರಿಣಾಮ ಇಲ್ಲದೇ ಇರುವದರಿಂದ, ಈ ಕುರಿತು ಅರಿವು ಮೂಡಿಸುವ ಜೊತೆಗೆ ಅರ್ಹರು ನುಂಗಿದ ಬಗ್ಗೆ ಖಾತ್ರಿಪಡಿಸಿಕೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಇದೇ ಸಂದರ್ಭದಲ್ಲಿ ಆನ್ಲೈನ್ ಮೂಲಕ ಉಪಸ್ಥಿತರಿದ್ದ ಆರೋಗ್ಯ ಸಚಿವರು, ಕಾರ್ಯಕ್ರಮದ ಸಿದ್ದತೆ ಹಾಗೂ ಔಷಧಿ ನುಂಗಿಸುವ ಕಾರ್ಯಕ್ರಮ ಪರಿಶೀಲಿಸಿದರು. ಜಿಲ್ಲಾಧಿಕಾರಿ ಡಾ.ಸುಶೀಲ.ಬಿ ಅವರು ಮಾತನಾಡಿ,

ಅತೀಅಪಾಯವುಳ್ಳ ಗ್ರಾಮಗಳಲ್ಲಿ ಯೋಜನಾಬದ್ಧವಾಗಿ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು. ಕ್ಷೇತ್ರ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ಹಿಸಿ ಗುರಿಗೆ ತಕ್ಕಂತೆ ಅರ್ಹರಿಗೆ ಗುಳಿಗೆ ನುಂಗಿಸಬೇಕು. ಅರ್ಹರು ಈ ಮಾತ್ರೆ ಪಡೆಯಲು ನಿರಾಕರಿಸದಂತೆ ಎಚ್ಚರಿಕೆ ವಹಿಸಬೇಕು. ಒಮ್ಮೆ ಆನೆಕಾಲು ರೋಗ ಬಂದಲ್ಲಿ ನಿವಾರಣೆ ಕಷ್ಟ ಸಾಧ್ಯ, ಜೊತೆಗೆ ಅಂಗವಿಕಲತೆಗೂ ಕಾರಣವಾಗುವದರಿಂದ ನಿರಂತರ ಮನವರಿಕೆ ಮಾಡಿ, ಅರ್ಹರು ಈ ಗುಳಿಗೆಗಳನ್ನು ಪಡೆಯುವಂತೆ ನೋಡಿಕೊಳ್ಳಲು ಸೂಚಿಸಿ, ಜಿಲ್ಲೆಯನ್ನು ಆನೆಕಾಲು ರೋಗ ಮುಕ್ತ ಜಿಲ್ಲೆಯನ್ನಾಗಿಸಲು ಸಹಕರಿಸುವಂತೆ ಕರೆನೀಡಿದರು*.

ಅಧಿಕಾರಿಗಳು ಪರಸ್ಪರ ಸಮನ್ವಯತೆಯಿಂದ ಕಾರ್ಯನಿರ್ವಹಿಸಿ ಗುರಿಗೆ ತಕ್ಕಂತೆ ಗುಳಿಗೆ ನುಂಗಿಸುವ ಕಾರ್ಯದಲ್ಲಿ ಪ್ರಗತಿ ಸಾಧಿಸಬೇಕು. ಆಯಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸ್ವಚ್ಛತೆ, ಶೌಚಾಲಯ ಶುಚಿತ್ವ, ಸೊಳ್ಳೆಗಳ ನಿಯಂತ್ರಣ ಕ್ರಮ ಕೈಗೊಳ್ಳಬೇಕು. ಯಾವುದೇ ಗ್ರಾಮ ಬಿಟ್ಟುಹೋಗದಂತೆ ಎಚ್ಚರಿಕೆ ವಹಿಸಬೇಕು ಎಂದು ಸೂಚನೆ ನೀಡಿದರು.

ಮಲೇರಿಯಾ ರೋಗ ನಿಯಂತ್ರಣಾಧಿಕಾರಿ ಡಾ. ಎಮ್.ಎ. ಸಾಜೀದ್ ಅವರು ಮಾತನಾಡಿ, ಐವರ್ ಮೆಕ್ಟಿನ್, ಡಿ.ಇ.ಸಿ ಹಾಗೂ ಆಲ್ಬೆಂಡಜೋಲ್ ತ್ರಿವಳಿ ಗುಳಿಗೆ ಸಂಪೂರ್ಣ ಸುರಕ್ಷಿತ ಹಾಗೂ ಪರಿಣಾಮಕಾರಿಯಾಗಿವೆ. ಆನೆಕಾಲು ರೋಗ ಲಕ್ಷಣಗಳಾದ ಕೈಕಾಲುಗಳಲ್ಲಿ ಊತ, ಸ್ತನ ವೃಷಣಗಳು ದಪ್ಪವಾಗುವುದು, ಕ್ರಮೇಣ ದೈಹಿಕ ಅಂಗವಿಕಲತೆ ಉಂಟಾಗಬಹುದಾಗಿದ್ದು, ವಡಗೇರಾ ಬ್ಲಾಕ್ ನ 6 ಪಿ.ಹೆಚ್.ಸಿ ಬೆಂಡೆಬೆಂಬಳಿ, ಚಟ್ನಳ್ಳಿ, ಹಯ್ಯಾಳ.ಬಿ, ಕುರಕುಂದಾ ಶಿರವಾಳ, ತಡಬಿಡಿಗಳ ವ್ಯಾಪ್ತಿಯಲ್ಲಿ ಗುಳಿಗೆ ನುಂಗಿಸುವ ಕಾರ್ಯಕ್ರಮ ಫೆಬ್ರವರಿ 10 ರಿಂದ 28ರವರೆಗೆ ನಡೆಯಲಿದೆ. ಪ್ರತಿ ದಿನ ಮನೆಗಳಿಗೆ ಭೇಟಿ ನೀಡಿ ಔಷಧಿ ನೀಡಲಾಗುತ್ತದೆ. ಮನೆ ಮನೆಗೆ ನಿಯೋಜಿತ ಸಿಬ್ಬಂದಿಗಳು ಭೇಟಿ ನೀಡುವರು.

1ರಿಂದ 2 ವರ್ಷ ವಯೋಮಾನದವರಿಗೆ ಈ ಮಾತ್ರೆ ನೀಡಲಾಗಲ್ಲ. 2 ರಿಂದ 5 ವರ್ಷ ದೊಳಗಿನ ಮಕ್ಕಳಿಗೆ ಡಿ.ಇ.ಸಿ 100 ಮಿ.ಗ್ರಾಂ –1 ಗುಳಿಗೆ, 400ಮಿ.ಗ್ರಾಂ ನ ಚಪ್ಪರಿಸುವ– 1 ಗುಳಿಗೆ ನೀಡಲಾಗುತ್ತದೆ. 6 ರಿಂದ 14 ವರ್ಷ ವಯೋಮಾನದವರಿಗೆ ,2 – ಡಿ.ಇ.ಸಿ ಹಾಗೂ 1– ಆಲ್ಬೆಂಡಜಾಲ್ 1ಗುಳಿಗೆ ಹಾಗೂ 15 ವರ್ಷ ಮೇಲ್ಪಟ್ಟ ವರಿಗೆ ಡಿಇಸಿ– 3 ಗುಳಿಗೆ ಹಾಗೂ 1 –ಆಲ್ಬೆಂಡಜಾಲ್ ಗುಳಿಗೆ ನೀಡಲಾಗುತ್ತದೆ. ಅದರಂತೆ ಎತ್ತರಕ್ಕೆ ಅನುಗುಣವಾಗಿ ಐವರಮೆಕ್ಟಿನ್ ಮಾತ್ರೆ ನೀಡಲಾಗುತ್ತದೆ.

ಐವರಮೆಕ್ಟಿನ್ ಮಾತ್ರೆ 5 ವರ್ಷ ದೊಳಗಿನ ಮಕ್ಕಳಿಗೆ ನೀಡಬಾರದು. ಹಾಗೂ 3 ವಿಧವಾದ ಮಾತ್ರೆಗಳನ್ನು ಗರ್ಭಿಣಿಯರಿಗೆ, ಹೃದಯ, ಶ್ವಾಸಕೋಶ , ಮೂತ್ರಪಿಂಡ ಸಂಬಂಧಿ ದೀರ್ಘಾವಧಿ ಖಾಯಿಲೆಯಿಂದ ನರಳುತ್ತಿರುವವರಿಗೆ ಈ ಗುಳಿಗೆಗಳನ್ನು ನೀಡಬಾರದು ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಗ್ರಾಮ.ಪಂ ಅಧ್ಯಕ್ಷ ಮೆಹರುನ್ನಿಸಾ ಬೇಗಂ, ಉಪಾಧ್ಯಕ್ಷ ಯಲ್ಲಮ್ಮ, ವಡಗೇರಾ ತಹಸೀಲ್ದಾರ್ ಚಾಪೆಲ್, ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಿಕಾರ್ಜುನ ಸಂಗ್ವಾರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಮಹೇಶ್ ಬಿರಾದಾರ್, ಮಾಜಿ ಜಿ.ಪಂ ಸದಸ್ಯ ಉಮಾರೆಡ್ಡಿಗೌಡ ಪಾಟೀಲ್, ಶಾಂತರೆಡ್ಡದೇಸಾಯಿ, ತಾಲೂಕ ಆರೋಗ್ಯಾಧಿಕಾರಿ (ಪ್ರ), ಡಾ. ರತ್ನಾ, ವಡಗೇರಾ ಮುಖ್ಯ ಆಡಳಿತ ವೈದ್ಯಾಧಿಕಾರಿ ಡಾ.ಜಗನ್ನಾಥರೆಡ್ಡಿ,

ಸೇರಿದಂತೆ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು. ಜಿಲ್ಲಾ ವಿಬಿಡಿ ಸಮಾಲೋಚಕರು ಬಸವ್ ರಾಜ್ ಕಾಂತಾ ಸ್ವಾಗತಿಸಿದರು. ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ತುಳಸಿರಾಮ ಚವ್ಹಾಣ ಕಾರ್ಯಕ್ರಮ ನಿರೂಪಿಸಿದರು.


# ತೊಗರಿ ಕ್ವಿಂ. ಗೆ ೮೦೦೦ ರೂ. ಬೆಂಬಲ ಬೆಲೆಯಂತೆ ಖರೀದಿ



ಮಲ್ಲಮ್ಮ ನುಡಿ ವಾರ್ತೆ

ಔರಾದ:ಫೆ.10: 2024–25ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ತೊಗರಿ ಖರೀದಿ ಕೇಂದ್ರ ಸೋಮವಾರ ಜಲಾನೆಯ ರೈತ ಉತ್ಪಾದಕ ಕಂಪನಿ ಬಾದಲಗಾವ ಅಧ್ಯಕ್ಷರು ಶಿವಕುಮಾರ್ ಬಿರಾದರ್ ಚಾಲನೆ ನೀಡಿದರು ಕೇಂದ್ರ ಸರ್ಕಾರದ ಬೆಂಬಲ ಬೆಲೆ ರೂ.7,550 ರ ಜೊತೆಗೆ ರಾಜ್ಯ ಸರ್ಕಾರದ ಪ್ರೋತಾಹ ಧನ ರೂ.450 ಪ್ರತಿ ಕ್ವಿಂಟಾಲ್‌ಗೆ, ಸೇರಿ ಒಟ್ಟು ರೂ.8,000 ಪ್ರತಿ ಕ್ವಿಂಟಾಲ್ ರಂತೆ ತೊಗರಿ ಖರೀದಿಸಲಾಗುವುದು ಎಂದು ತಿಳಿಸಿದ್ದರು. ರೈತ ಬಾಂಧವರು ಎಫ್‌ಪಿಓ ಬಾದಲಗಾವ ಗ್ರಾಮಕ್ಕೆ ಭೇಟಿ ನೀಡಿ ನೊಂದಣಿ ಮಾಡಿಕೊಂಡು ಬೆಂಬಲ ಬೆಲೆ ಯೋಜನೆಯ ಹಾಗೂ ರಾಜ್ಯ ಸರ್ಕಾರದ ಪ್ರೋತ್ಸಾಹ ಧನದ ಸದುಪಯೋಗ ಪಡೆದುಕೊಳ್ಳಲು ಕೋರಿದ್ದಾರೆ.

# ಅರ್ಥಪೂರ್ಣವಾಗಿ ಸರ್ವಜ್ಞನ ಜಯಂತಿ ಆಚರಣೆಗೆ ನಿರ್ಧಾರ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ಫೆ:10:ಸಂತಕವಿ ಸರ್ವಜ್ಞನ ಜಯಂತಿಯನ್ನು ಜಿಲ್ಲಾಡಳಿತದವತಿಯಿಂದ ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ.

ಅಪರ ಜಿಲ್ಲಾಧಿಕಾರಿ ಶ್ರೀ ಶರಣಬಸಪ್ಪ ಕೋಟೆಪ್ಪಗೋಳ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಸಂತಕವಿ ಸರ್ವಜ್ಞನ ಜಯಂತಿ ಆಚರಣೆ ಕುರಿತ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ.

ಸಭೆಯ ಅಧ್ಯಕ್ಷತೆ ವಹಿಸಿದ್ದ ಅಪರ ಜಿಲ್ಲಾಧಿಕಾರಿ ಶ್ರೀ ಶರಣಬಸಪ್ಪ ಕೋಟೆಪ್ಪಗೋಳ ಅವರು, ಸಂತ ಕವಿ ಸರ್ವಜ್ಞನ ಜಯಂತಿಯೂ ಫೆಬ್ರವರಿ 20 ರಂದು ಇರುವುದರಿಂದ ಜಿಲ್ಲೆಯ ಎಲ್ಲ ಶಾಲೆ, ಕಾಲೇಜು, ಕಚೇರಿಗಳಲ್ಲಿ, ತಾಲೂಕ ಮಟ್ಟದ ಜಯಂತಿಯನ್ನು ಅರ್ಥಪೂರ್ಣವಾಗಿ ಅಂದು ಆಚರಿಸಲಾಗುವುದು.

ಈಗ ಸಮಾಜದ ಮುಖಂಡರು, ಪ್ರತಿನಿಧಿಗಳ ಬೇಡಿಕೆಯ ಹಿನ್ನೆಲೆಯಲ್ಲಿ ಬರುವ ಫೆಬ್ರವರಿ 24 ರಂದು ಜಿಲ್ಲಾ ಮಟ್ಟದ ಕಾರ್ಯಕ್ರಮವನ್ನು ನಗರದ ಸರ್ಕಾರಿ ಪದವಿ ಮಹಾವಿದ್ಯಾಲಯದಲ್ಲಿ ಮಧ್ಯಾಹ್ನ 12–30 ಗಂಟೆಗೆ ಸಂತ ಕವಿ ಶ್ರೀ ಸರ್ವಜ್ಞನ ಜಯಂತಿಯನ್ನು ಆಚರಿಸಲು ಇಂದಿನ ಸಭೆಯಲ್ಲಿ ನಿರ್ಧರಿಸಲಾಯಿತು.

ಶಿಷ್ಟಾಚಾರದಂತೆ ಅತಿಥಿ ಗಣ್ಯರನ್ನು ಆಹ್ವಾನಿಸಲು, ವೇದಿಕೆ, ಆಹ್ವಾನ ಪತ್ರಿಕೆ ಸೇರಿದಂತೆ ಇನ್ನಿತರ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಅದರಂತೆ ಜಿಲ್ಲೆಯ ಎಲ್ಲ ಶಾಲಾ, ಕಾಲೇಜು, ಕಚೇರಿಗಳಲ್ಲಿ ಈ ಜಯಂತಿ ಆಚರಿಸಲು ಹಾಗೂ ತಾಲೂಕು ಮಟ್ಟದಲ್ಲಿ, ಈ ಜಯಂತಿಯನ್ನು ಆಚರಣೆಗೆ ಸಕಲ ಕ್ರಮಗಳನ್ನು ಕೈಗೊಳ್ಳಬೇಕು, ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಸೂಕ್ತ ಪೊಲೀಸ್ ಬಂದೋಬಸ್ತ ಮಾಡಲು ಹಾಗೂ ನುರಿತ ಉಪನ್ಯಾಸಕರನ್ನು ಜಿಲ್ಲಾಮಟ್ಟದಲ್ಲಿ ಕಾರ್ಯಕ್ರಮಕ್ಕೆ ಆಹ್ವಾನಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಸಭೆ, ಜಯಂತ್ಯೋತ್ಸವ ಸಮಿತಿ ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಕಾರ್ಯಕ್ರಮ ಅಚ್ಚುಕಟ್ಟಾಗಿ ಆಯೋಜಿಸಬೇಕು, ಜಿಲ್ಲೆಯ ಅಧಿಕಾರಿಗಳು, ಸಿಬ್ಬಂದಿಗಳು, ಆಯಾ ಸಮಾಜದ ಮುಖಂಡರು, ಸಂಘ ಸಂಸ್ಥೆಗಳವರು ತಪ್ಪದೇ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಅವರು ಸಲಹೆ ನೀಡಿದರು. ಮೆರವಣಿಗೆ ಕುರಿತು ಮುಂಚಿತವಾಗಿ ಜಿಲ್ಲಾಡಳಿತದ ಗಮನಕ್ಕೆ ತರಬೇಕು ಎಂದು ಹೇಳಿದರು.

ಸಭೆಯಲ್ಲಿ , ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಉತ್ತರದೇವಿ ಮಠಪತಿ, ಸರ್ವಜ್ಞ ತಾಲೂಕ ಸಂಘದ ತಾಲೂಕಾಧ್ಯಕ್ಷ ಬಸವರಾಜ ಅಜಲಾಪುರ್, ಉಪಾಧ್ಯಕ್ಷರಾದ ಶಾಂತಮ್ಮ ಕುಂಬಾರ್, ಮಲ್ಲಿಕಾರ್ಜುನ, ಕಾರ್ಯದರ್ಶಿಗಳಾದ ರಮೇಶ್ ಕುಂಬಾರ್ ಬದ್ದೇಪಲ್ಲಿ, ದೇವೇಂದ್ರ ಯರಗೋಳ, ನರಸಿಂಹಲು ಸೌರಾಷ್ಟ್ರಹಳ್ಳಿ, ಬಿಚ್ಚಪ್ಪ ಕುಂಬಾರ್, ಶ್ರೀಕಾಂತ್ ಮೋದಿ, ರಾಜೇಂದ್ರ ಕುಮಾರ್, ಹರ್ಷವರ್ಧನ್ ಗುರುಮಠಕಲ್, ಹನುಮಂತ ಮಗದಮಪುರ್, ವಿಜಯಕುಮಾರ್ ಕೊಂಕಲ್ ಹಾಗೂ ಇತರರು ಉಪಸ್ಥಿತರಿದ್ದರು.

# ಸಮಾಜಕ್ಕೆ ಕಾಯಕನಿಷ್ಠೆ ತತ್ವಾದರ್ಶ ಹೇಳಿಕೊಟ್ಟ ಕಾಯಕ ಶರಣರು: ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ್



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ಫೆ:10:ಕಾಯಕನಿಷ್ಠೆಯ ತತ್ವ ಆದರ್ಶವನ್ನು ಸಮಾಜಕ್ಕೆ ತಿಳಿಸಿಕೊಟ್ಟ ಕಾಯಕ ಶರಣರು, ಕಾಯಕದಲ್ಲಿಯೇ ಕೈಲಾಸವಿದೆ ಎಂದು ಸಮಾಜಕ್ಕೆ ತಿಳಿ ಹೇಳಿದರು ಎಂದು ನಗರ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ್ ಅವರು ಹೇಳಿದರು.

ನಗರದ ಕನ್ನಡ ಸಾಹಿತ್ಯ ಪರಿಷತ್ತು ಸಭಾಂಗಣದಲ್ಲಿ ಇಂದು ಏರ್ಪಡಿಸಿದ್ದ ಕಾಯಕ ಶರಣರ ಜಯಂತಿ ಕಾರ್ಯಕ್ರಮದಲ್ಲಿ, ಕಾಯಕ ಶರಣರ ಭಾವಚಿತ್ರಕ್ಕೆ ಪೂಜೆಸಲ್ಲಿಸಿ, ಗೌರವ ಅರ್ಪಿಸಿ ಅವರು ಮಾತನಾಡಿದರು.

ಸತ್ಕರ್ಮದ ಕಾಯಕದಿಂದ ವ್ಯಕ್ತಿ ಬೆಳೆಯುತ್ತಾನೆ. ಜೀವನದಲ್ಲಿ ಸದಾ ಕಾಯಕನಿರತರಾಗಬೇಕೆಂಬುದು ಶರಣರ ಧ್ಯೇಯ ಹಾಗೂ ತತ್ವಾದರ್ಶವಾಗಿತ್ತು. ಮನಸ್ಸಿನಿಂದ ಮಾಡುವ ಕಾಯಕವೇ ದೊಡ್ಡದೆಂದು ನಂಬಿದವರು ಶರಣರು. ಮಾದಾರ ಚನ್ನಯ್ಯ, ಸಮಗಾರ ಹರಳಯ್ಯ, ಡೋಹರ ಕಕ್ಕಯ್ಯ, ಉರಿಲಿಂಗ ಪೆದ್ದಿ, ಮಾದಾರ ಧೂಳಯ್ಯರವರಂತಹ ಮುಂತಾದ ಮಹಾನ್ ಶರಣರು ತಮ್ಮ ಕಾಯಕದ ಆದರ್ಶದಿಂದ ಸಮಾಜದ ಸ್ವಾಸ್ಥ್ಯವನ್ನು ಕಾಪಾಡಿದರು ಎಂದು ಹೇಳಿದರು.

12ನೆಯ ಶತಮಾನದಲ್ಲಿಯೇ ಬಸವಾದಿ ಶರಣರು ದುಡಿಮೆಯ ಮಹತ್ವವನ್ನು ಸಮಾಜಕ್ಕೆ ಹೇಳಿಕೊಟ್ಟು ಸಮಾಜ ತಿದ್ದುವ ಕಾರ್ಯಮಾಡಿದರು. ಅಂತಹ ಕಾಯಕ ಶರಣರು ಇಂದಿಗೂ ನಮಗೆ ದಾರಿದೀಪವಾಗಿದ್ದಾರೆ ಎಂದು ಹೇಳಿದರು.

ಸಮಾರಂಭದಲ್ಲಿ ಉಪನ್ಯಾಸ ನೀಡಿದ, ಸರ್ಕಾರಿ ಪದವಿ ಕಾಲೇಜು ಉಪನ್ಯಾಸಕರಾದ ಶ್ರೀ ನರಸಪ್ಪ ಚಿತ್ತಾಪುರ ಅವರು ಶರಣರು ತಾವು ಮಾಡುವ ಕಾಯಕನಿಷ್ಠೆ ಹಾಗೂ ತಮ್ಮ ವಚನಗಳಿಂದಲೇ ಇಂದಿಗೂ ಸ್ಮರಣೀಯರಾಗಿದ್ದಾರೆ. ಮಾದರಿಯಾಗಿದ್ದಾರೆ. ಶರಣರು ನೀಡಿದ ಸಮಾನತೆಯ ಸಿದ್ಧಾಂತ ಇಂದಿಗೂ ಪ್ರಸ್ತುತವಾಗಿದೆ. ಶರಣರು ಎಲ್ಲರನ್ನೂ ಸಮಾನವಾಗಿ ಕಂಡರು. ಶರಣರು ಆರೋಗ್ಯಕರ ಸಮಾಜಕ್ಕಾಗಿ ಶ್ರಮಿಸಿದರು ಎಂದರು. ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಉತ್ತರ ದೇವಿ ಮಠಪತಿ, ಕಾಯಕಶರಣರ ಜಯಂತೋತ್ಸವದ ಅಧ್ಯಕ್ಷರುಗಳಾದ ನಾಗರಾಜ್ ಬೀರನೋರ್, ಮಲ್ಲು ದೊಡ್ಮನಿ ಬೆಳಗೆರೆ, ಭೀಮರಾಯ ಹೊಸಮನಿ, ಶಾಂತಪ್ಪ ಖಾನಳ್ಳಿ, ಸೈದಪ್ಪ ಕೊಲೂರ, ಕಾಶಪ್ಪ ಹೆಗ್ಗಣಗೇರಾ

ಮರೆಪ್ಪ ಶಿರವಾಳ ಮತ್ತು ತಂಡ ದಿಂದ ಸಂಗೀತ ಕಾರ್ಯಕ್ರಮ ನಡೆಸಿದರು, ಸಮಾಜದ ಮುಖಂಡರಾದ ಮರೆಪ್ಪ ಚಟ್ಟರ್ಕರ್, ಗೋಪಾಲ್, ಭೀಮಶಂಕರ್ ಯಾರಗೊಳ, ವಿಜಯಕುಮಾರ್, ಭೀಮರಾಯ ಲಿಂಗೇರಿ, ತಿಪ್ಪಣ್ಣ ಅಳಿಗೇರ, ಮಲ್ಲಿಕಾರ್ಜುನ್ ಜಿನೆಕೆರೆ ಸೇರಿದಂತೆ ಇತರರು ಉಪಸ್ಥಿತರಿದ್ದರು. ದೇವಿಂದ್ರ ಧೋತ್ರ ಕಾರ್ಯಕ್ರಮ ನಿರೂಪಿಸಿದರು.

# ಎಸ್ ಎಸ್ ಎಲ್ ಸಿ ಫಲಿತಾಂಶ ಸುಧಾರಣೆಗೆ ಅಧಿಕಾರಿಗಳು ವಿಶೇಷ ಗಮನ ನೀಡಿ: ಡಾ. ಸುಶೀಲಾ ಬಿ



ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:ಫೆ:10:ಜಿಲ್ಲೆಯಲ್ಲಿ ಎಸ್ ಎಸ್ ಎಲ್ ಸಿ ಫಲಿತಾಂಶ ಉತ್ತಮಪಡಿಸುವ ವಿನೂತನ ಕಾರ್ಯಕ್ರಮಗಳ ಮೂಲಕ ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರಿಯಾಗಿಟ್ಟುಕೊಂಡು ಯೋಜನೆ, ಕಾರ್ಯರೂಪಕ್ಕೆ ತರಲು ಸಂಬಂಧಿಸಿದ ಅಧಿಕಾರಿಗಳು ವಿಶೇಷ ಗಮನ ನೀಡುವಂತೆ ಜಿಲ್ಲಾಧಿಕಾರಿ ಡಾ. ಸುಶೀಲಾ ಬಿ. ಅವರು ಸೂಚಿಸಿದರು.

ಜಿಲ್ಲಾಡಳಿತಭವನದಆಡಿಟೋರಿಯಂ ಸಭಾಂಗಣದಲ್ಲಿ ಎಸ್ ಎಸ್ ಎಲ್ ಸಿ. ಫಲಿತಾಂಶ ಸುಧಾರಣೆ ಕುರಿತಂತೆ ಗ್ರಾಮ ಪಂಚಾಯತ್ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರೊಂದಿಗೆ ನಡೆದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಜಿಲ್ಲೆಯ ಪ್ರಗತಿಯನ್ನು ನಿರ್ಧರಿಸುವ ಹಲವಾರು ಸೂಚ್ಯಂಕಗಳಲ್ಲಿ ಶಿಕ್ಷಣದ ಗುಣಮಟ್ಟವು ಒಂದು. ಸಾಮಾನ್ಯವಾಗಿ ಶಿಕ್ಷಣದ ಗುಣಮಟ್ಟವನ್ನು ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ಫಲಿತಾಂಶದ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ. ಸಾಮಾನ್ಯವಾಗಿ ಯಾದಗಿರಿ ಜಿಲ್ಲೆಯ ಎಸ್ ಎಸ್ ಎಲ್ ಸಿ ಫಲಿತಾಂಶ ಬೇರೆ ಜಿಲ್ಲೆಗಳಿಗೆ ಹೋಲಿಸಿದಲ್ಲಿ ಎಲ್ಲಾ ಜಿಲ್ಲೆಗಳಿಗಿಂತ ಕಡಿಮೆ ಇದೆ. ಈ ಬಾರಿ ಎಸ್ ಎಸ್ ಎಲ್ ಸಿ ಫಲಿತಾಂಶವನ್ನು ಉತ್ತಮಪಡಿಸುವದೆಸೆಯಲ್ಲಿಅನೇಕ ವಿನೂತನಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರಿಯವಾಗಿಟ್ಟುಕೊಂಡು ಯೋಜನೆ ತರಲಾಗುತ್ತಿದ್ದು, ಸಂಬಂಧಿಸಿದ ಅಧಿಕಾರಿಗಳು ಈ ದಿಶೆಯಲ್ಲಿ ಪ್ರಾಮಾಣಿಕ ಪ್ರಯತ್ನಮಾಡುವಂತೆ ಸೂಚನೆ ನೀಡಿದರು.

ಮಕ್ಕಳ ಕಲಿಕೆಯನ್ನು ಪರಿಶೀಲಿಸಲು ಜಿಲ್ಲಾ ಹಂತದ, ಬ್ಲಾಕ್ ಹಂತದ ಎಲ್ಲ ಇಲಾಖೆಗಳ ಅಧಿಕಾರಿಗಳಿಗೆಜವಾಬ್ದಾರಿವಹಿಸಿ ಆದೇಶ ನೀಡಲಾಗಿದೆ. ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ವಿದ್ಯಾರ್ಥಿಗಳ ಗೈರುಹಾಜರಿ ಹಾಗೂ ಪೋಷಕರ ನಿರಾಸಕ್ತಿಯು ಫಲಿತಾಂಶದ ಮೇಲೆ ಪರಿಣಾಮ ಬೀರುತ್ತದೆ ಎಂದು ತಿಳಿದುಬಂದಿರುವ ಹಿನ್ನೆಲೆಯಲ್ಲಿ ತಾವು ಹಾಗೂ ಜಿಲ್ಲಾ ಪಂಚಾಯತಿ, ಮುಖ್ಯ ಕಾರ್ಯನಿರ್ವಣಾಧಿಕಾರಿಗಳು ಜಂಟಿಯಾಗಿ ಸಭೆ ಮತ್ತು ಕಾರ್ಯಾಗಾರ ನಡೆಸಿ ಎಸ್ ಎಸ್ ಎಲ್ ಸಿ ಫಲಿತಾಂಶ ಉತ್ತಮ ಪಡಿಸುವ ನಿಟ್ಟಿನಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ತಮ್ಮ ವ್ಯಾಪ್ತಿಯಲ್ಲಿ ಮಕ್ಕಳಿಗೆ ಪರೀಕ್ಷೆಗೆ ಬಾಕಿ ಇರುವ 40 ದಿನಗಳ ವರೆಗೆ ಯಾವುದೇ ಮಗು ಶಾಲೆ ಬಿಡದಂತೆ ಹಾಗೂ ಶಾಲಾ ಅವಧಿಯ ನಂತರ ತೊಡಗಿಕೊಳ್ಳುವಂತಾಗಬೇಕು.

ಈ ದಿಶೆಯಲ್ಲಿಯಲ್ಲಿ ಉತ್ತಮ ವಾತಾವರಣ ರೂಪಿಸಲು ಪಾಲಕರ ಮತ್ತು ಪೋಷಕರ ಮನವೊಲಿಸಿ ಮನೆಯಲ್ಲಿ ಟಿವಿ ಮೊಬೈಲ್ ಬಳಸದಂತೆ ನಿಗಾ ವಹಿಸುವಂತೆಯೂ ಸಲಹೆ ನೀಡಲು ಸೂಚಿಸಲಾಯಿತು.

ಗ್ರಾಮ ಪಂಚಾಯತ್ ಗ್ರಂಥಾಲಯಗಳಲ್ಲಿ ರಾತ್ರಿವೇಳೆ ತರಗತಿಗಳನ್ನು ಹಮ್ಮಿಕೊಳ್ಳಲು ವ್ಯವಸ್ಥೆ ಕಲ್ಪಿಸಲು ಕೋರಿದ ಅವರು "ನಮ್ಮ ಮಕ್ಕಳು ನಮ್ಮ ಹೆಮ್ಮೆ" ಎಂಬುದನ್ನು ಮತ್ತು ಅವರ ಉಜ್ವಲ ಭವಿಷ್ಯ ರೂಪಿಸಲು ಶಿಕ್ಷಣ ಇಲಾಖೆಯೊಂದಿಗೆ ಕೈಜೋಡಿ ಸುವಂತೆ ಮನವಿ ಮಾಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಲವೀಶ್ ಒರಡಿಯಾ ಅವರು ಮಾತನಾಡಿ, ಜಿಲ್ಲೆಯ ಫಲಿತಾಂಶವನ್ನು ಉತ್ತಮಪಡಿಸಲು 20ಅಂಶಗಳ ಕಾರ್ಯಕ್ರಮಗಳನ್ನು ಇಲಾಖೆಯು ಜಾರಿಗೊಳಿಸುತ್ತಿದ್ದು, ಉತ್ತಮ ರೀತಿಯಲ್ಲಿ ಪಾಲಕರು ಹಾಗೂ ಶಿಕ್ಷಕರು ಅವುಗಳನ್ನು ಅನುಷ್ಠಾನಗೊಳಿಸುತ್ತಿದ್ದಾರೆ. ಶಾಲಾ ಅವಧಿಯ ನಂತರ ಅವರಿಗೆ ಮನೆಯಲ್ಲಿಯೇ ಓದಿಕೊಳ್ಳುವಂತಾಗಲು ಉತ್ತಮ ಮೇಲ್ವಿಚಾರಣೆ ಅಗತ್ಯವಿದೆ. ಇದಕ್ಕಾಗಿ ತಾವೆಲ್ಲರೂ ಸಹಕರಿಸಲು ಅವರು ಕೋರಿದರು.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ಸಿ. ಎಸ್ ಮುಧೋಳ್ ಅವರು ಮಾತನಾಡಿ, ಇಲ್ಲಿಯವರಿಗೆ ಜಿಲ್ಲೆಯ ಫಲಿತಾಂಶ ಸುಧಾರಣೆಗಾಗಿ ಕೈಗೊಳ್ಳಲಾಗುತ್ತಿರುವ ಕ್ರಮಗಳ ಬಗ್ಗೆ ತಿಳಿಸಿ ಪಾಲಕ-ಪೋಷಕರಿಂದ ಹಾಗೂ ಗ್ರಾಮ ಪಂಚಾಯತ್ ಅಧ್ಯಕ್ಷರು ಉಪಾಧ್ಯಕ್ಷರುಗಳಿಂದ ಬೇಕಾದ ಸಹಕಾರದ ಕುರಿತು ವಿವರಿಸಿದರು.

ಕಾರ್ಯಾಗಾರದಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿಗಳು ಹಾಗೂ ಆಯಾ ತಾಲೂಕಿನ ತಾ.ಪಂ ಕಾರ್ಯನಿರ್ವಹಣಾಧಿಕಾರಿಗಳು ಉಪಸ್ಥಿತರಿದ್ದರು.

## ಗಾಣಗಾಪೂರದಲ್ಲಿ ಮಾಘ-ಉತ್ಸವ ಹಿನ್ನೆಲೆ: ವಿಶೇಷ (ಹೆಚ್ಚಿನ) ಬಸ್‌ಗಳ ವ್ಯವಸ್ಥೆ

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ,ಫೆ.10:ಇದೇ ಫೆಬ್ರವರಿ 12 ರಿಂದ 16 ರವರೆಗೆ ದೇವಲ ಗಾಣಗಾಪೂರದಲ್ಲಿ ಜರುಗಲಿರುವ ಮಾಘ-ಉತ್ಸವ ಹಿನ್ನೆಲೆಯಲ್ಲಿ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಕಲಬುರಗಿ ವಿಭಾಗ-2 ವತಿಯಿಂದ ಈ ಕೆಳಕಂಡ ಮಾರ್ಗಗಳಲ್ಲಿ ವಿಶೇಷ (ಹೆಚ್ಚಿನ) ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ ಎಂದು ಕರ್ನಾಟಕ ರಸ್ತೆ ಸಾರಿಗೆ ನಿಗಮ ಕಲಬುರಗಿ ವಿಭಾಗ-2ರ ವಿಭಾಗೀಯ ನಿಯಂತ್ರಣಾಧಿಕಾರಿಗಳು ತಿಳಿಸಿದ್ದಾರೆ.

ದೇವಲ ಗಾಣಗಾಪೂರ-ಅಕ್ಕಲಕೋಟ-ಸೋಲಾಪೂರ, ದೇವಲ ಗಾಣಗಾಪೂರ-ಗಾಣಗಾಪೂರ ಸ್ಟೇಷನ್, ಕಲಬುರಗಿ-ಚೌಡಾಪೂರ-ದೇವಲ ಗಾಣಗಾಪೂರ, ದೇವಲ ಗಾಣಗಾಪೂರ-ಕಲಬುರಗಿ-ಜಹೀರಬಾದ ಹೈದ್ರಾಬಾದ್, ದೇವಲ ಗಾಣಗಾಪೂರ-ಅಫಜಲಪೂರ-ಅಕ್ಕಲಕೋಟ ಹಾಗೂ ದೇವಲ ಗಾಣಗಾಪೂರ-ಉಮರ್ಗಾ-ಲಾತೂರ ಮಾರ್ಗಗಳಲ್ಲಿ ಬಸ್‌ಗಳ ವ್ಯವಸ್ಥೆಗಳ ಮಾಡಲಾಗಿದ್ದು, ಸಾರ್ವಜನಿಕ, ಪ್ರಯಾಣಿಕರು, ಯಾತ್ರಾರ್ಥಿಗಳು ಈ ಹೆಚ್ಚುವರಿ ವಿಶೇಷ (ಹೆಚ್ಚಿನ) ಬಸ್‌ಗಳ ಸದುಪಯೋಗವನ್ನು ಪಡೆಯಬೇಕೆಂದು ಅವರು ತಿಳಿಸಿದ್ದಾರೆ.

## ಫೆ.12 ರಂದು ಮಕ್ಕಳ ಆರೋಗ್ಯ ತಪಾಸಣೆ ಶಿಬಿರ ಮತ್ತು ಪಿಂಕ್ ವ್ಯಾನ್ ಜಾಥಾ ಕಾರ್ಯಕ್ರಮ

ಮಲ್ಲಮ್ಮನುಡಿವಾರ್ತೆ ಬಳ್ಳಾರಿ,ಫೆ.10:ಜಿಲ್ಲಾಡಳಿತ ಮತ್ತು ಭಾರತೀಯ ಮಕ್ಕಳ ತಜ್ಞ ವೈದ್ಯರ ಸಂಘ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಮಕ್ಕಳಲ್ಲಿನ ಅಪೌಷ್ಠಿಕತೆಯನ್ನು ಗುರ್ತಿಸಲು 5ನೇ ತರಗತಿಯಿಂದ 10ನೇ ತರಗತಿ ಒಳಗಿನ ಮಕ್ಕಳ ಆರೋಗ್ಯದ ತಪಾಸಣೆ ಮತ್ತು ಪಿಂಕ್ ವ್ಯಾನ್ ಜಾಥಾ ಕಾರ್ಯಕ್ರಮವನ್ನು ಫೆ.12 ರಂದು ಬೆಳಿಗ್ಗೆ 10 ಗಂಟೆಗೆ ಬಿ.ಡಿ.ಎ. ಫುಟ್ಬಾಲ್ ಮೈದಾನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.


ಮಾರ್ಗ: ಪಿಂಕ್ ವ್ಯಾನ್ ಜೊತೆundefine2d ಕಾಲ್ನಡಿಗೆ ಜಾಥಾವು ಬೆಳಿಗ್ಗೆ 9 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಆವರಣದಿಂದ (ರೈಲ್ವೇ ಸ್ಟೇಷನ್ ಎದುರಿಗೆ) ಆರಂಭಗೊಂಡು ಬಿ.ಡಿ.ಎ ಫುಟ್ಬಾಲ್ ಮೈದಾನದವರೆಗೆ ನಡೆಯಲಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

## ಭಾಗ್ಯಲಕ್ಷ್ಮಿ-ಸುಕನ್ಯಾ ಸಮೃದ್ಧಿ ಯೋಜನೆ: ಸಂಬಂಧಪಟ್ಟ ಫಲಾನುಭವಿಗಳು ಉಚಿತವಾಗಿ ಪಾಸ್‌ಬುಕ್ ಪುಸ್ತಕ ಪಡೆಯಲು ಸೂಚನೆ

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ,ಫೆ.10:ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ 2023-24ನೇ ಸಾಲಿನಲ್ಲಿ ಭಾಗ್ಯಲಕ್ಷ್ಮಿ-ಸುಕನ್ಯಾ ಸಮೃದ್ಧಿ ಯೋಜನೆಯಡಿ ಮೊದಲನೇ ಮತ್ತು ಎರಡನೇ ಹೆರಿಗೆಯಲ್ಲಿ ಜನಿಸಿದ ಹೆಣ್ಣು ಮಗುವಿಗೆ ಪ್ರತಿವರ್ಷ 3,000 ರೂ.ರಂತೆ 15 ವರ್ಷದವರೆಗೆ ಮಂಜೂರಾಗಿದ್ದು, ಫಲಾನುಭವಿಗಳ ಪಾಸ್‌ಬುಕ್ ಪುಸ್ತಕಗಳನ್ನು ಅಂಚೆ ಇಲಾಖೆಯಿಂದ ಸ್ವೀಕರಿಸಿ ಸಂಬಂಧಪಟ್ಟ ಆಯಾ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ವಿತರಿಸಲಾಗಿದೆ ಎಂದು ಕಲಬುರಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ಆದ್ದರಿಂದ ಅರ್ಹ ಸಂಬಂಧಪಟ್ಟ ಫಲಾನುಭವಿಗಳು ಆಯಾ ತಾಲೂಕಿನ ಶಿಶು ಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ಇದಕ್ಕೆ ಯಾವುದೇ ರೀತಿಯ ಹಣ ಪಾವತಿಸದೇ ಉಚಿತವಾಗಿ ಪಾಸ್‌ಬುಕ್ ಪುಸ್ತಕವನ್ನು ಸ್ವೀಕರಿಸಬೇಕು. ಒಂದು ವೇಳೆ ಯಾರಾದಾರೂ ಹಣ ಕೇಳುತ್ತಿದ್ದರೆ ಅಥವಾ ಪಾಸ್‌ಬುಕ್ ಪುಸ್ತಕ ನೀಡಲು ವಿಳಂಬ ಮಾಡುತ್ತಿದ್ದಲ್ಲಿ ತಕ್ಷಣ ಕಲಬುರಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಿಗೆ ದೂರು ನೀಡಬೇಕು. ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಆಯಾ ತಾಲೂಕಿನ ಶಿಶು ಅಭಿವೃದ್ಧಿ ಯಾಜನಾಧಿಕಾರಿಗಳನ್ನು ಸಂಪರ್ಕಿಸಲು ಕೋರಲಾಗಿದೆ.

## ಯುವ ಪೀಳಿಗೆಗೆ ವಚನಗಳ ಬಗ್ಗೆ ಅರಿವು ತುಂಬಾ ಮುಖ್ಯ : ಶರಣಪ್ಪ ರಾವಣಕಿ



ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:ಫೆ.10: ಕುಕನೂರು ಮಕ್ಕಳಲ್ಲಿ ವಚನ ಸಾಹಿತ್ಯದ ಬಗ್ಗೆ ಅರಿವು ಮೂಡಿಸಲು ಶಾಲಾ ಪಠ್ಯಗಳಲ್ಲಿ ವಚನ ಸಾಹಿತ್ಯದ ಅದ್ಯಾಯಗಳನ್ನು ಹೆಚ್ಚಾಗಿ ಸೇರಿಸಬೇಕಾಗಿದೆ ಎಂದು ಹಿರಿಯ ಸಾಹಿತಿ ಡಾ ಕೆ ಬಿ ಬ್ಯಾಳಿ ಹೇಳಿದರು.

ಪಟ್ಟಣದ ಪ್ರವಾಸಿಮಂದಿರದಲ್ಲಿ ಅಖಿಲ ಭಾರತ ವಚನ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಿಷತ್ ನ ಪ್ರಥಮ ಸಭೆಯಲ್ಲಿ ಅವರು ಮಾತನಾಡಿದರು.

ವಚನ ಸಾಹಿತ್ಯ ವಿಶ್ವಬ್ರಾತೃತ್ವದ ದಿವ್ಯ ಸಾಹಿತ್ಯವಾಗಿದೆ. ಇಂದಿನ ಪೀಳಿಗೆಗೆ ವಚನ ಸಾಹಿತ್ಯದ ತಿಳುವಳಿಕೆಮತ್ತುಪ್ರಭಾವಹೆಚ್ಚಿಸಲು ಪಠ್ಯದಲ್ಲಿ ಅಧ್ಯಯನಗಳನ್ನು ಸೇರಿಸಬೇಕು. ವಚನಗಳನ್ನು ಸರ್ವರಿಗೂ ತಿಳಿಸಲು ವಚನ ಪರಿಷತ್ ಮುಂದಿನ ದಿನಗಳಲ್ಲಿ ಶಾಲೆಗೊಂದು ವಚನ ಸಾಹಿತ್ಯ ಕಾರ್ಯಕ್ರಮ ಆಯೋಜಿಸಿದರೆ ಉತ್ತಮ ಎಂದು ಹೇಳಿದರು.

ಜೀವನದ ನೀತಿನಿಯಮಗಳನ್ನು ಶರಣರ ವಚನಗಳಲ್ಲಿ ಕಾಣಬಹುದು. ಮೆಕ್ಯಾಲೆ ಇಂಗ್ಲಿಷ್ ಶಿಕ್ಷಣಪದ್ಧತಿ ದೇಶದಲ್ಲಿ ವ್ಯಾಪಿಸಿದಂತೆ ವಚನಗಳು ಇಂದಿನ ಯುವ ಪೀಳಿಗೆ ಬದುಕಿನಲ್ಲಿ ಅಳವಡಿಸಿಕೊಳ್ಳುವ ಕಾರ್ಯಕ್ರಮಗಳನ್ನು ವಚನ ಪರಿಷತ್ ಹಮ್ಮಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಶಿಕ್ಷಣ ಸಂಯೋಜಕ, ಸಾಹಿತಿ ಶರಣಪ್ಪರಾವಣಕಿ ಮಾತನಾಡಿ, ಪ್ರತೀ ಗ್ರಂಥಾಲಯದಲ್ಲಿ ವಚನ ಪುಸ್ತಕಗಳು ಹೆಚ್ಚು ಲಭ್ಯವಾಗಬೇಕು. ಯುವ ಪೀಳಿಗೆಗೆ ವಚನಗಳ ಬಗ್ಗೆ ಅರಿವು ಮೂಡಿಸಲು ಪರಿಷತ್ ನಿಂದ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಗುವುದು ಎಂದರು.

ಈ ಸಂದರ್ಭದಲ್ಲಿ ವಚನ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಈರಯ್ಯ ಕುರ್ತ-ಕೋಟಿ, ನಿವೃತ್ತ ಶಿಕ್ಷಕರು, ಸಾಹಿತಿಗಳಾದ ನಿಂಗಪ್ಪ ತಟ್ಟಿ, ಆದುನಿಕ ವಚನ ಸಾಹಿತಿ, ಶಿಕ್ಷಕ ಬಸವರಾಜ್ ಉಪ್ಪಿನ್, ಪೀರ್ ಸಾಬ್ ದಫೆದಾರ್, ಉಮೇಶ್ ಕಂಬಳಿ, ಶಂಭು ಅರಿಶಿನದ, ಚಂದ್ರುದೊಡ್ಡಮನಿ, ತಿಪ್ಪಣ್ಣ ಹೊಸಮನಿ, ಅಡಿವೆಪ್ಪ ಬೋರಣ್ಣವರ, ಇತರರು ಉಪಸ್ಥಿತರಿದ್ದರು.

## ಹಿಬಾರೆ ಶಾಲೆಯ ವಿಜ್ಞಾನ, ಕಲಾ ವಸ್ತು ಪ್ರದರ್ಶನಕ್ಕೆ ಚಾಲನೆ




ಮಲ್ಲಮ್ಮ ನುಡಿ ವಾರ್ತೆ ಹುಮ್ನಾಬಾದ.ಫೆ.9:ತಾಲ್ಲೂಕಿನ ಹಳ್ಳಿಖೇಡ(ಬಿ) ಗ್ರಾಮದಲ್ಲಿ ಆರ್ ಜಿ ಹಿಬಾರೆ ಪಬ್ಲಿಕ್ ಶಾಲೆಯ ವಿಜ್ಞಾನ & ಕಲಾ ವಸ್ತು ಪ್ರದರ್ಶನ ಹಾಗೂವಿದ್ಯಾಮಹೋತ್ಸವ 2025 ಕಾರ್ಯಕ್ರಮದಲ್ಲಿ ಮಾನ್ಯ ಮಾಜಿ ಸಚಿವರಾದ ಸನ್ಮಾನ್ಯ ಶ್ರೀ ರಾಜಶೇಖರ ಬಿ ಪಾಟೀಲ್‌ರವರು ಕಾರ್ಯಕ್ರಮದ ಉದ್ಘಾಟಕರಾಗಿ ಪಾಲ್ಗೊಂಡು ದೀಪಬೆಳಗಿಸುವ ಮುಖಾಂತರ ಕಾರ್ಯಕ್ರಮ ಉದ್ಘಾಟಿಸಿ ವಿಧ್ಯಾರ್ಥಿಗಳಿಂದ ಏರ್ಪಡಿಸಿದ್ದ ವಸ್ತು ಪ್ರದರ್ಶನವನ್ನು ತಮ್ಮ ಅಮೃತ ಹಸ್ತದಿಂದ ಉದ್ಘಾಟಿಸಿ ವಿಧ್ಯಾರ್ಥಿಗಳಿಂದ ಏರ್ಪಟ್ಟ ಉತ್ತಮ ಕಲಾ ಪ್ರದರ್ಶನಕ್ಕೆ ವೇದಿಕೆಯುನ್ನೂದ್ದೇಶಿಸಿ ಮಾತನಾಡಿದರು. ಹಳ್ಳಿಖೇಡ (ಬಿ)ವ್ಯಾಪ್ತಿಯಲ್ಲಿ ಸುಮಾರು 50 ಶಿಕ್ಷಣ ಸಂಸ್ಥೆಗಳು ಬರುತ್ತವೆ ಅದರಲ್ಲಿ ಮತ್ತು ಬೀದರ ಜಿಲ್ಲೆಯಲ್ಲಿ ಎಸ್.ಎಸ್. ಎಲ್.ಸಿ ಫಲಿತಾಂಶ 2024ರಲ್ಲಿ ನಂ.1 ಸ್ಥಾನ ಆರ್.ಜಿ.ಹಿಬಾರೆ ಸ್ಕೂಲ್ ಪಡೆದಿದೆ ಎಂದು ಶ್ಲಾಘಿಸಿದರು. ಮುಖ್ಯ ಅತಿಥಿ-ಯಾಗಿ ಬಿಹಾರದ ಉದ್ಯಮಿ ಶ್ರೀ ರಾಹುಲ್ ಕುಮಾರ ಮಿಶ್ರ ಅವರು ಮಾತನಾಡಿ ಬೀದರ ಜಿಲ್ಲೆಯಲ್ಲಿ ಯುವಕರಿಗೆ ಕ್ರಿಕೆಟ್ ಟೂರ್ನಮೆಂಟ್ ಇತರೆ ಆಟಗಾರರಿಗೆ ನನ್ನ ವೈಯಕ್ತಿಕವಾಗಿ ಪ್ರಥಮ ಬಹುಮಾನ.ರೂ.1.00.000 ಬಿಡಲಾಗುತ್ತದೆ. ದ್ವೀತಿಯ ಬಹುಮಾನ ರೂ.50.000 ನೀಡುವುದಾಗಿ ಭರವಸೆ ನೀಡಿದರು. ಶ್ರೀ ಕೇಶವರಾವ ತಳಘಟಕರ (ಮಾಜಿ ಜಿ.ಪಂ ಸದಸ್ಯರು) ಶ್ರೀ ರಾಹುಲ ಮಿಶ್ರಾ (ಸಾಮಾಜಿಕ ಕಾರ್ಯಕರ್ತರು), ಶ್ರೀ ನಾಗರಾಜ ಹಿಬಾರೆ (ಅಧ್ಯಕ್ಷರು ಆರ್ ಜಿ ಹಿಬಾರೆ ಪಬ್ಲಿಕ್ ಶಾಲೆ), ಶ್ರೀಮತಿ ರುಚಿತಾ ನಾಗರಾಜ ಹಿಬಾರೆ (ಆರ್ ಜೆ. ಹಿಬಾರೆ ಪಬ್ಲಿಕ್ ಶಾಲೆ ಸಂಸ್ಥಯ ಕಾರ್ಯದರ್ಶಿಗಳು), ಶ್ರೀಯುಸುಫ್‌ಸೌದಾಗರ್,(ಪುರಸಭೆ ಸದಸ್ಯರು), ವಿಜಯಕುಮಾರ ಕಖಖ ಹಳ್ಳಿಖೇಡ (ಬಿ) ಶ್ರೀ ಭೀಮರಾವನಾಯಕ(ಸಾಮಾಜಿಕ ಕಾರ್ಯಕರ್ತರು) ಶ್ರೀಮತಿ ಕೆ.ಶಿಲ್ಪಾವತಿ (ಪ್ರಾಂಶುಪಾಲರು) ಪ್ರಮುಖರಾದ ಅಬ್ದುಲ ರಜಾಕ್, ಅಶೋಕ ಬಾವಗಿ, ಶಿವರಾಜ ಲಾಡಕರ್, ಸಂತೋಷ ಪಾಟೀಲ್ ಡಾಕೋಳಗಿ, ಚಾಂದ ಖುರೇಷಿ, ಶಾಂತು ಅರಳಿ, ರಮೇಶ ಮಾಳಗೆ, ಸಂದೀಪ ತಿರ್ಥಾ

ಚಂದು ಮಾಲೆ, ಆಕಾಶ ಶಿಂಧೆ, ಸೋಮನಾಥ ಜ್ಯಾಂತೆ, ಹಸನ್ ರವರು ಸೇರಿದಂತೆ ಹಳ್ಳಿಖೆಡ್ ಬಿ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಗೌರವಾನ್ವಿತ ಪುರಸಭಾ ಸದಸ್ಯರು, ಹಿರಿಂಮರು, ತಾಯಂದಿರು, ಶಾಲಾ ಆಡಳಿತಮಂಡಳಿಯ ಸದಸ್ಯರು, ಶಿಕ್ಷಕ ವೃಂದದವರು ಸೇರಿದಂತೆ ಗಣ್ಯರು ಮಾಧ್ಯಮ ಮಿತ್ರರು ಉಪಸ್ಥಿತರಿದ್ದರು

## ಕನ್ನಡ ಸಾಹಿತ್ಯಕ್ಕೆ ವಚನ ಚಳುವಳಿಯ ಕೊಡುಗೆ ಅಪಾರ



ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ,ಫೆ.10-ಕನ್ನಡ ಸಾಹಿತ್ಯಕ್ಕೆ ವಚನ ಚಳುವಳಿಯ ಕೊಡುಗೆ ಅಪಾರವಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಪರಶುರಾಮ ಶಿನ್ನಾಳಕರ ಹೇಳಿದರು.

ಜಿಲ್ಲಾ ಪಂಚಾಯತ ಸಭಾಭವನದಲ್ಲಿ ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಕಾಯಕ ಶರಣರ ಜಯಂತಿ ಕಾರ್ಯಕ್ರಮದಲ್ಲಿ ಶರಣರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಸಂವಿಧಾನವೆಂಬ ಸಮಾನತೆ ಸಾರುವ ಪ್ರಬಲ ಅಸ್ತ್ರಕ್ಕೂ ಸ್ಫೂರ್ತಿಯಾಗಿರುವುದು ವಚನ ಚಳುವಳಿ. ಆದರೆ ಇಂದಿನ ಸಮಾಜದಲ್ಲಿ ಸಾಧಕರನ್ನು ಜಾತಿಯಿಂದ ಗುರುತಿಸುತ್ತಿರುವುದು ವಿಷಾಧನೀಯ ಎಂದರು.

ಉಪನ್ಯಾಸ ನೀಡಿದ ಶರಣ ತತ್ವ ಚಿಂತಕ ಜೆ.ಎಸ್.ಪಾಟೀಲ, 12ನೇ ಶತಮಾನದಲ್ಲಿ ಬಸವಣ್ಣವರ ಕಾಯಕ ಮತ್ತು ದಾಸೋಹ ಆರ್ಥಿಕ ಸೂತ್ರಗಳಾಗಿದ್ದವು. ಬುದ್ಧ, ಬಸವ ಮತ್ತು ಅಂಬೇಡ್ಕರ್ ಪ್ರತಿಪಾದಿಸಿದ ಸಂಸ್ಕೃತಿ ನೆಲಮೂಲ ಸಂಸ್ಕೃತಿಯಾಗಿದ್ದು, ಅಸಮಾನತೆ, ಜಾತಿ ನಿರ್ಮೂಲನೆಗಾಗಿ ಚಳುವಳಿಗಳು ಹುಟ್ಟಿಕೊಂಡವು. ಇದರ ಪರಿಹಾರವಾಗಿಯೇ ಬಸವಣ್ಣವರ ಕಾಯಕ ಮತ್ತು ದಾಸೋಹಗಳು ಆರ್ಥಿಕ ಸೂತ್ರಗಳಾಗಿದ್ದವು ಸ್ವಾತಂತ್ರ್ಯ ಚಳುವಳಿಗೂ ಮುನ್ನವೇ ಆರ್ಯ, ಬುದ್ಧನ ಅಹಿಂಸೆ ಮತ್ತು ಬಸವಣ್ಣನವರ ಕ್ರಾಂತಿಯ ಮೂಲಕ ಮೂರು ಸ್ವಾತಂತ್ರ್ಯ ಸಂಗ್ರಾಮಗಳು ನಡೆದವು. ಬ್ರಿಟಿಷರ ವಿರುದ್ಧದ ಹೋರಾಟವಷ್ಟೇ ಸ್ವಾತಂತ್ರ್ಯ ಸಂಗ್ರಾಮವಲ್ಲ, ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಗಳು ಕೂಡ ಸ್ವಾತಂತ್ರ್ಯ ಸಂಗ್ರಾಮಗಳಾಗಿದ್ದವು ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕರ್ಣಕುಮಾರ ಜೈನಾಪೂರ, ಜಿಲ್ಲಾ ಅಲ್ಪಸಂಖ್ಯಾತ ಕಲ್ಯಾಣಾಧಿಕಾರಿ ಶಿವಾನಂದ ಪಟ್ಟಣಶೆಟ್ಟಿ, ಸಮುದಾಯದ ಮುಖಂಡರಾದ ವಾಯ್. ವಾಯ್.ತಿಮ್ಮಾಪೂರ, ಎ.ಎಸ್.ಚಂದಾವರಿ, ರೇಣುಕಾ ನ್ಯಾಮಗೌಡ, ಪ್ರೇಮಾನಾಥ ಗರಸಂಗಿ, ಮನೋಹರ ಹಾಗೂ ಇತರರು ಇದ್ದರು. ಕುಮಾರಿ ವೈಷ್ಣವಿ ಗೂಳಿ ಮತ್ತು ತಂಡದವರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

# ಮಹಿಳಾ ಉದ್ಯಮಿಯರಾಗಿ ಇತರರಿಗೆ ಉದ್ಯೋಗ ನೀಡಿ; ಕುಲಪತಿ ಎಂ.ಹನುಮಂತಪ್ಪ



ಮಲ್ಲಮ ನುಡಿ ವಾರ್ತೆ

ರಾಯಚೂರು. ಫೆ 10: ಇಂದಿನ ಆಧುನಿಕ ಯುಗದಲ್ಲಿ ಮಹಿಳೆಯರಿಗೆ ಪುರುಷರಂತೆ ಮುಕ್ತವಾಗಿ ಬದುಕುವ ಹಕ್ಕು ಇದೆ. ಮಹಿಳೆಯರಿಗಾಗಿ ಇರುವ ಉದ್ಯಮಶೀಲತಾ ತರಬೇತಿ ಕಾರ್ಯಕ್ರಮದ ಸದುಪಯೋಗ ಪಡೆದು, ಮಹಿಳಾ ಉದ್ಯಮಿಯರಾಗಿ, ಉದ್ಯೋಗ ನೀಡಿ ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಎಂ.ಹನುಮಂತಪ್ಪ ಅವರು ಹೇಳಿದರು.

ಫೆ.10ರ ಸೋಮವಾರದಂದು ಕೃಷಿ ವಿವಿಯ ಸಭಾಂಗಣದಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ವತಿಯಿಂದ ರಾಷ್ಟ್ರೀಯ ಜೀವನೋಪಾಯ ಅಭಿಯಾನದ ಸ್ವ–ಸಹಾಯ ಸಂಘದ ಸದಸ್ಯರಿಗೆ ಸಂಕಲ್ಪ ಯೋಜನೆಯಡಿ ಐದು ದಿನಗಳ ಉದ್ಯಮಶೀಲತಾ ತರಬೇತಿ ಕಾರ್ಯಕ್ರಮದ ಸಮರೋಪ ಸಮಾರಂಭದ ಕಾರ್ಯಕ್ರಮದಲ್ಲಿ ಪ್ರಮಾಣ ಪತ್ರ ವಿತರಿಸಿ ಅವರು ಮಾತನಾಡಿದರು.

ಮನೆ ನಿರ್ವಹಣೆ ಹಾಗೂ ಕೃಷಿ ಮತ್ತು ಕೃಷಿಯೇತರ ಅವಲಂಬಿತ ಕ್ಷೇತ್ರದಲ್ಲಿ ಮಹಿಳೆಯರು ಪಾತ್ರ ಬಹಳ ಇದೆ. ಮಹಿಳೆಯರು ಸ್ವಂತ ಉದ್ಯೋಗ ಪ್ರಾರಂಭಿಸಬೇಕು. ನಿಮ್ಮ ನಿಮ್ಮ ಆರೋಗ್ಯ ಕಾಪಾಡಿಕೊಳ್ಳುವ ಮೂಲಕ ಉತ್ತಮ ಉದ್ಯಮದಾರರಾಗಬೇಕು. ಸರ್ಕಾರಕ್ಕೆ ಒಳ್ಳೆ ಹೆಸರು ತರಬೇಕೆಂದು ಸಲಹೆ ನೀಡಿದರು.

ಮಹಿಳೆಯರು ಸ್ವಂತ ಬ್ರಾಂಡ್ಗಳನ್ನು ಪ್ರಾರಂಭಿಸಬೇಕು. ನಿಮ್ಮನ್ನು ನೋಡಿ ಇತರರು ನಿಮ್ಮನ್ನು ಅನುಸರಿಸಬೇಕು. ಮಹಿಳೆಯರು ಸಮಗ್ರ ಕೃಷಿಯತ್ತ ಹೆಚ್ಚಿನ ಗಮನ ಹರಿಸಬೇಕು. ಸಮಗ್ರ ಕೃಷಿಯಲ್ಲಿ ಹೆಚ್ಚಿನ ಲಾಭ ದೊರೆಯುತ್ತದೆಂದು ಹೇಳಿದರು.

ಈ ವೇಳೆ ಸಿಡಾಕ್ ಜಂಟಿ ನಿರ್ದೇಶಕರಾದ ಜಿ.ಯು. ಹುಡೇದ್ ಅವರು ಮಾತನಾಡಿ, ಸಮುದಾಯ ಮತ್ತು ಕುಟುಂಬದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿದ್ದು, ಈ ಹಿನ್ನೆಲೆಯಲ್ಲಿ ಮಹಿಳೆಯರು ಸ್ವ–ಉದ್ಯೋಗವನ್ನು ಕೈಗೊಳ್ಳಬೇಕು. ಸಂಸಾರವನ್ನು ಮುನ್ನಡೆಸಿಕೊಂಡು ಹೋಗುವ ಜವಾಬ್ದಾರಿ ಪ್ರತಿಯೊಬ್ಬ ಮಹಿಳೆಯ ಮೇಲಿದೆ. ಎಲ್ಲ ಕ್ಷೇತ್ರಗಳಲ್ಲಿಯೂ ಮುಕ್ತವಾಗಿ ಮುನ್ನಡೆದುಕೊಂಡು ಹೋಗುವ ಅವಕಾಶ ಇದೆ. ಹಾಗಾಗಿ ಮಹಿಳೆಯರು ಯಾವುದೇ ಸಂಕೋಚವಿಲ್ಲದೆ ದುಡಿಯುವಂತಾಗಬೇಕು ಎಂದರು.

ಈ ವೇಳೆ ವಿವಿಧ ಶಿಬಿರಾರ್ಥಿಗಳ ಅನಿಸಿಕೆಗಳಯನ್ನ ಹೇಳಿದರು.

ಇದೇ ಸಂದರ್ಭದಲ್ಲಿ ಕೃಷಿ ವಿದ್ಯಾಲಯದ ಸಾವಯವ ಕೃಷಿ ಸಂಶೋಧನಾ ಮುಖ್ಯಸ್ಥರಾದ ಡಾ.ಬಸವಣ್ಣಪ್ಪ ಸಂಪನ್ಮೂಲ ವ್ಯಕ್ತಿ ಗೌರಮ್ಮ, ಡೇ–ನಲ್ಮ್ ವ್ಯವಸ್ಥಾಪಕರಾದ ರಸೂಲ್ ಸಾಬ್, ಸಿಡಕ್ ನಾಗರಾಜ್ ಸೇರಿದಂತೆ ಇತರರು ಇದ್ದರು.

## ಬೆಳೆಗಳ ಸುಧಾರಣೆಯಲ್ಲಿ ಜೈವಿಕ ತಂತ್ರಜ್ಞಾನದ ಬಳಕೆ ಕುರಿತು ಫೆ.11ರಂದು ಕಾರ್ಯಾಗಾರ

ರಾಯಚೂರು. ಫೆ 10: ಇಲ್ಲಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು ಭಾರತೀಯ ಜೈವಿಕ ತಂತ್ರಜ್ಞಾನ ಒಕ್ಕೂಟ ಮತ್ತು ಭಾರತ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆ ಇವರುಗಳ ಸಹಯೋಗದೊಂದಿಗೆ ಬೆಳೆಗಳ ಸುಧಾರಣೆಯಲ್ಲಿ ಜೈವಿಕ ತಂತ್ರಜ್ಞಾನದ ಬಳಕೆ ಕುರಿತು ಫೆ.11ರ ಬೆಳಿಗ್ಗೆ 10ಗಂ–ಟೆಗೆ ವಿವಿಯ ಆವರಣದ ಸಭಾಂಗದಲ್ಲಿ ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಿದೆ.

ಜೈವಿಕ ತಂತ್ರಜ್ಞಾನದಲ್ಲಾದ ಸಂಶೋಧನಾ ಫಲಿತಾಂಶಗಳ ಅಳವಡಿಕೆ ಹಾಗೂ ಈ ಪ್ರಕ್ರಿಯಯಲ್ಲಿರುವ ರೂಪು–ರೇಷಗಳು ಹಾಗೂ ನೀತಿಗಳನ್ನು ಬಳಕೆದಾರರಿಗೆ ತಿಳಿಪಡಿಸುವ ಉದ್ದೇಶ ಈ ಕಾರ್ಯಾಗಾರದ್ದಾಗಿದೆ. ಈ ನಿಟ್ಟಿನಲ್ಲಿ ಭಾರತ ಸರ್ಕಾರವು ಅನೇಕ ಉಪಕ್ರಮಗಳನ್ನು ತೆಗೆದುಕೊಂಡಿದ್ದರೂ ಕೂಡ ಈ ತಂತ್ರಜ್ಞಾನಗಳ ಕ್ಷೇತ್ರವಾರು ಪರೀಕ್ಷೆಯಲ್ಲಿ ಬರುವ ಸವಾಲುಗಳು ಇನ್ನೂ ಹಾಗೆಯೇ ಉಳಿದಿವೆ. ರೈತಬಾಂಧವರು ಹಾಗೂ ಇತರೆ ಬಳಕೆದಾರರಲ್ಲಿ ಉಂಟಾಗಿರುವ ಈ ರೀತಿಯ ದ್ವಂದ್ವ ಆಲೋಚನೆ ಅಥವಾ ವಿಚಾರಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಈ ಕಾರ್ಯಾಗಾರವು ಅತ್ಯಂತ ಮಹತ್ವದ್ದಾಗಿದೆ.

ಈ ಕಾರ್ಯಾಗಾರದ ಉದ್ಘಾಟನೆಯನ್ನು ಮಹಾರಾಷ್ಟ್ರದ ಪರ್ಬನಿಯಲ್ಲಿರುವ ವಸಂತರಾವ್ ನಾಯ್ಕ್ ಮರಾಠವಾಡ ಕೃಷಿ ವಿದ್ಯಾಪೀಠದ ವಿಶ್ರಾಂತ ಕುಲಪತಿಗಳಾದ ಡಾ. ವೆಂಕಟೇಶ್ವರಲು ಅವರು ನೆರವೇರಿಸುವರು.

ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಂ. ಹನುಮಂತಪ್ಪ ಅವರು ಅಧ್ಯಕ್ಷತೆ ವಹಿಸುವರು.

ಹೈದಾರಬಾದಿನ ಡಿಸಿಎಂ ಶ್ರೀರಾಮ್ ಲಿಮಿಟೆಡ್‌ನ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ. ಪರೇಶ್ ವರ್ಮಾ, ಹೈದಾರಬಾದಿನಲ್ಲಿರುವ ಭಾರತೀಯ ಭತ್ತ ಸಂಶೋಧನಾ ಸಂಸ್ಥೆಯ ಹಿರಿಯ ವಿಜ್ಞಾನಿಗಳಾದ ಡಾ. ಸತೇಂದ್ರ ಕುಮಾರ್ ಮಂಗ್ರೌಥಿಯಾ ಮತ್ತು ಭಾರತೀಯ ಜೈವಿಕ ತಂತ್ರಜ್ಞಾನ ಒಕ್ಕೂಟದ ಮುಖ್ಯಸ್ಥರಾದ ಡಾ.ವಿಭಾ ಅಹುಜಾ ಅವರುಗಳು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿರುವರು.

ಈ ಕಾರ್ಯಾಗಾರದಲ್ಲಿ ರಾಜ್ಯದ ಕೃಷಿ ಮತ್ತು ಸಂಬಂಧಿತ ಇಲಾಖೆಗಳ ಅಧಿಕಾರಿಗಳು, ಉದ್ದಿಮೆದಾರರು, ಪ್ರಗತಿಪರ ರೈತರು, ಕೃಷಿ ವಿಶ್ವವಿದ್ಯಾಲಯಗಳ ವಿಜ್ಞಾನಿಗಳು, ಸಂಶೋಧನಾ ವಿದ್ಯಾರ್ಥಿಗಳನ್ನೊಳಗೊಂಡಂತೆ ಸುಮಾರು 100 ಶಿಭಿರಾರ್ಥಿಗಳು ಭಾಗವಹಿಸುವರು.

ವಿಶ್ವವಿದ್ಯಾಲಯದ ಹತ್ತಿ ಸಂಶೋಧನಾ ವಿಭಾಗದ ಮುಖ್ಯಸ್ಥರಾದ ಡಾ. ಜೆ. ಎಂ. ನಿಡಗುಂದಿ ಅವರು ಈ ಕಾರ್ಯಾಗಾರದ ಸಂಘಟನಾ ಕಾರ್ಯದರ್ಶಿಯಾಗಿರುವರು ಎಂದು ವಿವಿಯ ಪ್ರಕಟಣೆ ತಿಳಿಸಿದೆ.

# ತಾಳಿಕೋಟಿ ಪುರಸಭೆ 'ಕೈ' ವಶ

## ಜುಬೇದಾ ಜಮಾದಾರ ಅಧ್ಯಕ್ಷೆ, ಗೌರಮ್ಮ ಕುಂಬಾರ ಉಪಾಧ್ಯಕ್ಷೆ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ:ಫೆ.10:ಪುರಸಭೆಯ 10 ನೇ ಅವಧಿಗೆ ಅಧ್ಯಕ್ಷರಾಗಿ ಜುಬೇದಾ ಹುಸೇನ್ ಬಾಷಾ ಜಮಾದಾರ ಹಾಗೂ ಉಪಾಧ್ಯಕ್ಷರಾಗಿ ಗೌರಮ್ಮ ಅವಣ್ಣ ಕುಂಬಾರ ಸೋಮವಾರ ಅವಿರೋಧವಾಗಿ ಆಯ್ಕೆಯಾಗುವುದರೊಂದಿಗೆ ಪುರಸಭೆ ಆಡಳಿತ ಕಾಂಗ್ರೆಸ್ ವಶವಾಯಿತು. ಕಾಂಗ್ರೆಸ್ ಬಿಜೆಪಿ ತಲಾ ಮೂರು, ಜೆಡಿಎಸ್ ಒಂದು, 16 ಪಕ್ಷೇತರರು ಒಬ್ಬರು ಸಂಸದರು ಹಾಗೂ ಶಾಸಕ ಸಿ.ಎಸ್.ನಾಡಗೌಡರು ಸೇರಿ 25 ಸದಸ್ಯ ಬಲ ಇರುವ ಪುರಸಭೆ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ಜುಬೇದಾ ಜಮಾದಾರ ಅಧ್ಯಕ್ಷ ಸ್ಥಾನಕ್ಕೆ, ಗೌರಮ್ಮ ಕುಂಬಾರ ಹಾಗೂ ಶಾಂತಾಬಾಯಿ ಹೊಟ್ಟಿ ಉಪಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದರು. ಚುನಾವಣಾಧಿಕಾರಿ ತಹಸಿಲ್ದಾರ್ ಕೀರ್ತಿ ಚಾಲಕ್ ನೇತೃತ್ವದಲ್ಲಿ ಆಯ್ಕೆ ಪ್ರಕ್ರಿಯೆ ಏರ್ಪಡಿಸಲಾಗಿತ್ತು. ಉಪಾಧ್ಯಕ್ಷ ಸ್ಥಾನದ ಶಾಂತಾಬಾಯಿ ಹೊಟ್ಟಿ ಮನವೊಲಿಕೆಯಿಂದ ತಮ್ಮ ನಾಮಪತ್ರ ಹಿಂತೆಗೆದುಕೊಂಡರು. ಆರು ಜನ ಸದಸ್ಯರು ಗೈರಾಗಿದ್ದರು ಚುನಾವಣಾ ಸಭೆಯಲ್ಲಿ 17 ಸದಸ್ಯರು ಹಾಜರಿದ್ದರಿಂದ ಕೋರಂ ಭರ್ತಿಯಾಯಿತು. ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಅಂತಿಮವಾಗಿ ಎರಡೇ ಹೆಸರು ಉಳಿದಿರುವುದರಿಂದ ಜುಬೇದಾ ಜಮಾದಾರ ಅಧ್ಯಕ್ಷರಾಗಿ ಹಾಗೂ ಗೌರಮ್ಮ ಕುಂಬಾರ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಘೋಷಿಸಲಾಯಿತು. ಪುರಸಭೆ ಮುಖ್ಯಾಧಿಕಾರಿ ಮೋಹನ ಜಾಧವ ಕಂದಾಯ ಹಾಗೂ ಪುರಸಭೆ ಸಿಬ್ಬಂದಿಗಳು ಪ್ರಕ್ರಿಯೆಗೆ ಸಹಕರಿಸಿದರು. ನಂತರ ನಡೆದ ವಿಜಯೋತ್ಸವದಲ್ಲಿ ಶಾಸಕ ನಾಡಗೌಡರು ಇಬ್ಬರನ್ನು ಅಭಿನಂದಿಸಿ ಮಾತನಾಡಿ ಕಳೆದ 22 ತಿಂಗಳುಗಳಿಂದ ಆಡಳಿತ ಮಂಡಳಿ ಇಲ್ಲದೆ ಅಭಿವೃದ್ಧಿಗೆ ಸ್ವಲ್ಪ ಮಟ್ಟದ ಹಿನ್ನಡೆ ಉಂಟಾಗಿತ್ತು ಈಗ ಅದು ದೂರಾಗಿದೆ. ನೂತನ ಅಧ್ಯಕ್ಷ ಉಪಾಧ್ಯಕ್ಷರು ಪಕ್ಷಾತೀತವಾಗಿ ಎಲ್ಲ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಟ್ಟಣದ ಅಭಿವೃದ್ಧಿಗೆ ಹೆಚ್ಚಿನ ಒಲವು ತೋರಿಸಬೇಕು. ಎಸ್.ಎಫ್.ಸಿ. ಅನುದಾನದಲ್ಲಿ ಈಗಾಗಲೇ 7 ಕೋಟಿ ಹಣ ಇದ್ದು ಉತ್ತಮ ಕ್ರಿಯಾ ಯೋಜನೆ ರೂಪಿಸಿ ಅದರ ಸದ್ಬಳಕೆಗೆ ಒತ್ತು ಕೊಡಬೇಕು. ಪುರಸಭೆಯಲ್ಲಿ ಬಹಳಷ್ಟು ಜನ ಅನುಭವಿ ಸದಸ್ಯರಿದ್ದಾರೆ ಅವರ ಮಾರ್ಗದರ್ಶನದಲ್ಲಿ ಉತ್ತಮವಾಗಿ ಕೆಲಸ ಮಾಡಿ ನಾನು ಸಹ ನಿಮ್ಮೊಂದಿಗಿದ್ದು ಸರ್ಕಾರದಿಂದ ಅನುದಾನವನ್ನು ತಂದುಕೊಡಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ. ರಾಜ್ಯದಲ್ಲಿ ಜನರು ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಮೆಚ್ಚಿ, ಪಕ್ಷದ ಮೇಲೆ ವಿಶ್ವಾಸವಿಟ್ಟು ನಮಗೆ ಆಶೀರ್ವಾದ ಮಾಡುತ್ತಿದ್ದಾರೆ ಇದು ಕಾಂಗ್ರೆಸ್ ಪಕ್ಷಕ್ಕೆ ಸಂದ ಗೆಲುವಾಗಿದೆ ಎಂದರು. ಈ ವೇಳೆ ಮುಖಂಡರಾದ ಬಿ.ಎಸ್.ಪಾಟೀಲ(ಯಾಳಗಿ), ಪ್ರಭುಗೌಡ ಮದರಕಲ್ಲ, ಸಿದ್ದನಗೌಡ ಪಾಟೀಲ (ನಾವದಗಿ) ,ಶರಣುಧಣಿ ದೇಶಮುಖ, ಸಂಗನಗೌಡ ಅಸ್ಕಿ, ಮಾಸೂಮಸಾಬ ಕೆಂಭಾವಿ, ಅಕ್ಕಮಹಾದೇವಿ ಕಟ್ಟಿಮನಿ, ಪರಶುರಾಮ ತಂಗಡಗಿ, ಮುಸ್ತಫಾ ಚೌಧರಿ, ಡಿ.ವಿ.ಬಡಿಗೇರ, ಅಣ್ಣಪ್ಪ ಜಗತಾಪ, ಅಬ್ದುಲ್ ಸತ್ತಾರ ಅವಟಿ, ಹುಸೇನ ಬಾಷಾ ಜಮಾದಾರ, ನಬಿ ಹುಣಶ್ಯಾಳ, ಮುನ್ನಾ ಅರ್ಜುಣಗಿ, ಮೆಹಬೂಬ ಕೆಂಭಾವಿ, ಫಯಾಜ್ ಉತ್ನಾಳ, ಸದ್ದಾಮ್ ಮನಗೂಳಿ, ಆಸಿಫ್ ಕೆಂಭಾವಿ, ಕಾಶಿನಾಥ ಕುಂಬಾರ, ಅಬ್ದುಲ್ ಖಾದಿರ್ ಕರೂಡಗೇರಿ ಸೇರಿ ಹಲವರು ಪಾಲ್ಗೊಂಡಿದ್ದರು. ಮುದ್ದೇಬಿಹಾಳ ಸಿಪಿಐ ಫಸಿಯುದ್ದೀನ ಪಾಷಾ, ಪಿಎ??? ರಾಮನಗೌಡ ಸಂಕನಾಳ ಹಾಗೂ ಪೊಲೀಸ್ ಸಿಬ್ಬಂದಿಗಳು ಬಿಗಿ ಭದ್ರತೆ ಒದಗಿಸಿದ್ದರು.

> ರಾಜ್ಯದಲ್ಲಿ ನಮ್ಮ ಸರ್ಕಾರವು ಜಾರಿಗೆ ತಂದ ಗ್ಯಾರಂಟಿ ಯೋಜನೆ ಹಾಗೂ ಉತ್ತಮ ಆಡಳಿತವನ್ನು ಮೆಚ್ಚಿ ಜನರು ನಮಗೆ ಆಶೀರ್ವಾದ ಮಾಡುತ್ತಿದ್ದಾರೆ, ಪುರಸಭೆಯಲ್ಲಿಯ ಇಂದಿನ ಈ ಗೆಲುವು ಕಾಂಗ್ರೆಸ್ ಪಕ್ಷಕ್ಕೆ ಸಂದ ಗೆಲುವಾಗಿದೆ. ಶಾಸಕ ಸಿ.ಎಸ್.ನಾಡಗೌಡ.

# ಸಮಸಮಾಜ ಕಟ್ಟುವಲ್ಲಿ ಕಾಯಕ ಶರಣರ ಕೊಡುಗೆ ಅಪಾರ; ಸುರೇಶ ವರ್ಮ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು. ಫೆ 10: ಮೂಢನಂಬಿಕೆಗಳು, ಜಾತಿ ಪದ್ಧತಿ, ಅಸಮಾನತೆಯ ವಿರುದ್ಧ ವಚನಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿ, ಸಮಸಮಾಜ ಕಟ್ಟುವಲ್ಲಿ ಕಾಯಕ ನಿಷ್ಠೆ ಮೆರೆದ ಕಾಯಕ ಶರಣರ ಕೊಡುಗೆ ಅಪಾರ ಎಂದು ರಾಯಚೂರು ತಹಶೀಲ್ದಾರ್ ಸುರೇಶ ವರ್ಮ ಅವರು ಹೇಳಿದರು.

ಫೆ.10ರ ಸೋಮವಾರದಂದು ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಕಾಯಕ ಶರಣರ ಜಯಂತಿ ಉದ್ಘಾಟಿಸಿ ಅವರು ಮಾತನಾಡಿದರು.

ಸರಳ ಜೀವನ, ಶುದ್ಧ ಧ್ಯಾನ, ನಿಷ್ಕಲ್ಮಶ ಭಕ್ತಿ ಮಾರ್ಗದಿಂದ ಮುಕ್ತಿ ಸಾಧ್ಯವೆಂದು ಸಾರಿದ ಕಾಯಕ ಶರಣರ ವಚನಗಳು ಇಂದಿಗೂ ಚಿರಪರಿಚಿತವಾಗಿವೆ. 12ನೇ ಶತಮಾನವು ಧಾರ್ಮಿಕ, ಸಾಮಾಜಿಕ, ರಾಜಕೀಯವಾಗಿ ಕ್ರಾಂತಿ ಉಂಟುಮಾಡಿದೆ. ಇವತ್ತಿನ ನಮ್ಮ ಸಂವಿಧಾನದ ಪಾರ್ಲಿಮೆಂಟ್ ಮಾದರಿಯಲ್ಲಿ ಅಂದಿನ ಅನುಭವ ಮಂಟಪ ಇತ್ತು. ಯಾರನ್ನೂ ಕೀಳಾಗಿ ಕಾಣಬಾರದು ಎಂಬುವುದು ಬಸವೇಶ್ವರರ ಸಮಾನತೆಯ ತತ್ವವಾಗಿದ್ದು, ಅವರ ಹಾದಿಯಲ್ಲಿ ನಡೆದ ಕಾಯಕ ಶರಣರಾದ ಮಾದಾರ ಚನ್ನಯ್ಯ, ಮಾದಾರ ಧೂಳಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ ಮತ್ತು ಉರಿಲಿಂಗ ಪೆದ್ದಿಯವರು ಶರಣ ಪಡೆಯ ಮಹನೀಯರಾಗಿದ್ದಾರೆ ಎಂದು ಹೇಳಿದರು.

ಈ ವೇಳೆ ಸಾಹಿತಿಗಳಾದ ವೀರಹನುಮಾನ್ ಅವರು ಉಪನ್ಯಾಸಕರಾಗಿ ಮಾತನಾಡಿ, ಶರಣದ ವಚನಗಳು ಇಂದಿನ ಆಧುನಿಕ ಯುಗದಲ್ಲಿ ಅತ್ಯವಶ್ಯಕವಾಗಿವೆ. ಯುವ ಪೀಳಿಗೆ ಅವರ ಆದರ್ಶಗಳನ್ನು ಪಾಲಿಸಿ ಮುನ್ನಡೆಯಬೇಕಿದೆ ಎಂದು ತಿಳಿಸಿದರು.

ಶರಣರು ತಮ್ಮ ವಚನದ ಮೂಲಕ ಸಾಹಿತ್ಯವನ್ನು ಸರಳ ಕನ್ನಡದಲ್ಲಿ ಸಮಾನ್ಯ ಜನರಿಗೆ ಅರ್ಥವಾಗುವ ರೀತಿ ತಿಳಿಸಿದ್ದಾರೆ. ಕಾಯಕದಲ್ಲಿ ಸ್ವರ್ಗ ಕಾಣಬಹುದು. ಕಾಯಕವೇ ದೇವರು ಎಂದು ಎಂದು ತಿಳಿಸಿಕೊಟ್ಟಿದ್ದಾರೆ. ನಡೆ ಮತ್ತು ನುಡಿ ಒಂದೇ ರೀತಿಯಲ್ಲಿ ಇರಬೇಕು. ಎಂದು ಶರಣರು ವಚನಗಳ ಮೂಲಕ ತಿಳಿಸಿದ್ದಾರೆ. ಶರಣರ ವಚನಗಳನ್ನು ಪಾಲಿಸಿದರೆ ಸಮಾಜದಲ್ಲಿ ಸಾಮಾಜಿಕ ಬದಲಾವಣೆ ಸಾಧ್ಯ ಎಂದರು.

ಇದಕ್ಕೂ ಮುಂಚೆ ಕಾರ್ಯಕ್ರಮದಲ್ಲಿ ಮಾದರ ಚನ್ನಯ್ಯ, ಮಾದರ ಧೂಳಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಉರಿಲಿಂಗ ಪೆದ್ದಿ ಕಾಯಕ ಶರಣರ ಭಾವಚಿತ್ರಕ್ಕೆ ವಿವಿಧ ಗಣ್ಯರು ಪುಷ್ಪಾರ್ಚನೆ ಮಾಡಿದರು.

ಇದೇ ಸಂದರ್ಭದಲ್ಲಿ ರಾಯಚೂರು ಮಹಾನಗರ ಪಾಲಿಕೆಯ ಅಧ್ಯಕ್ಷರಾದ ನರಸಮ್ಮ ನರಸಿಂಹಲು ಮಾಡಗಿರಿ, ರಾಯಚೂರು ತಾಲೂಕು ಗ್ರೇಡ್–2 ತಹಶೀಲ್ದಾರ್ ಭೀಮರಾಯ ಸೇರಿದಂತೆ ವಿವಿಧ ಮುಖಂಡರು ಇದ್ದರು.

# ಕ.ಕ.ರ.ಸಾ.ನಿಗಮ; ವಿವಿಧ ತರಬೇತಿಗೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು. ಫೆ 10: ಇಲ್ಲಿನ ಕಲ್ಯಾಣ ಕರ್ನಾಟಕ ರಸ್ತೆ ನಿಗಮ ರಾಯಚೂರು ವಿಭಾಗದಲ್ಲಿ ಖಾಲಿಯಿರುವ ಆಟೋ ಮೆಕ್ಯಾನಿಕ್, ಆಟೋ ವಿದ್ಯೂತ್ , ಆಟೋ ವೆಲ್ಡರ್, ಆಟೋ ಬಾಡಿ ಫೀಟರ್, ಆಟೋ ಪೇಂಟರ್ ಮತು ಆಟೋ ಮಷಿನಿಷ್ಟ್ ತರಬೇತಿಗೆ ಶಿಶುಕ್ಷುಗಳಾಗಿ ಕಾರ್ಯನಿರ್ವಹಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತಿವುಳ್ಳ ಐಟಿಐ ತೇರ್ಗಡೆ ಹೊಂದಿರುವ ಅರ್ಹ ಅಭ್ಯರ್ಥಿಗಳನ್ನು ಶಿಶುಕ್ಷು ತರಬೇತಿಗಾಗಿ ಆನ್‌ಲೈನ್ www.apprenticeshipindia.org ನಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಫೆ.18ರಂದು ಕ.ಕ.ರ.ಸಾ.ನಿಗಮದ ವಿಭಾಗೀಯ ಕಚೇರಿ ರಾಯಚೂರು ವಿಭಾಗ, ರಾಯಚೂರಿನಲ್ಲಿ ನಡೆಯುವ ನೇರ ಸಂದರ್ಶನಕ್ಕೆ ಆಯ್ಕೆ ಸಮಿತಿಯ ಮುಂದೆ ಹಾಜರಾಗುವಂತೆ ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಾಯಕ ಶರಣ ಜಯಂತಿ : ಜಿಲ್ಲಾಡಳಿತದಿಂದ ಪುಷ್ಪ ನಮನ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :ಫೆ.10: ಕಾಯಕ ಶರಣರ ಜಯಂತಿ ಅಂಗವಾಗಿ ಕೊಪ್ಪಳ ಜಿಲ್ಲಾಡಳಿತದ ವತಿಯಿಂದ ಕಾಯಕ ಶರಣ–ರಾದ ಮಾದರ ಚನ್ನಯ್ಯ, ಮಾದರ ಧೂಳಯ್ಯ, ಢೋಹರ ಕಕ್ಕಯ್ಯ, ಸಮಗಾರ ಹರಳಯ್ಯ ಮತ್ತು ಉರಿಲಿಂಗಪೆದ್ದಿಯವರ ಭಾವಚಿತ್ರಕ್ಕೆ ಫೆಬ್ರವರಿ 10 ರಂದು ಪುಷ್ಪನಮನ ಸಲ್ಲಿಸಲಾಯಿತು.

ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಕಾಯಕ ಶರಣರ ಜಯಂತಿಯನ್ನು ಜಿಲ್ಲಾಡಳಿತ ಕಛೇರಿ ಸಭಾಂಗಣದಲ್ಲಿ ಸರಳವಾಗಿ ಆಚರಿಸಲಾಯಿತು. ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರು ಕಾಯಕ ಶರಣರಾದ ಮಾದರ ಚನ್ನಯ್ಯ, ಮಾದರ ಧೂಳಯ್ಯ, ಢೋಹರ ಕಕ್ಕಯ್ಯ, ಸಮಗಾರ ಹರಳಯ್ಯ ಮತ್ತು ಉರಿಲಿಂಗಪೆದ್ದಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ್ ಮರಬನಳ್ಳಿ ಹಾಗೂ ಸಮಾಜದ ಮುಖಂಡರುಗಳಾದ ವೆಂಕಟೇಶ ಹೊಸಮನಿ, ರಾಮಣ್ಣ ಕಂದಾರಿ, ಸಿದ್ದಪ್ಪ ಕಲಾಲ್ ಬಂಡಿ, ಶಶಿಕುಮಾರ್ ಹಿರೇಮನ್ನಾಪುರ, ಜಿಲ್ಲಾಧಿಕಾರಿಗಳ ಕಾರ್ಯಾಲಯಾದ ಸಿಬ್ಬಂದಿ ನಾಗರಾಜ, ಮಹೇಂದ್ರ, ನವೀನ ಕುಮಾರ, ಉದಯ ಕುಮಾರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಉಪಸ್ಥಿತರಿದ್ದರು.

# ಶ್ರೀ ಮಾರುತಿ, ಶ್ರೀವಿಷ್ಣು ದೇವರ ಮೂರ್ತಿ ಪುನರ್ ಪ್ರತಿಷ್ಠಾಪನೆ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :ಫೆ.10: ಕುಕನೂರ ತಾಲೂಕಿನ ಮಂಡಲಗಿರಿ ಗ್ರಾಮದಲ್ಲಿ ಶ್ರೀ ಮಾರುತೇಶ್ವರ ಹಾಗೂ ಶ್ರೀ ವಿಷ್ಣುದೇವರ ಮೂರ್ತಿ ಪುನರ್ ಪ್ರತಿಷ್ಠಾಪನೆ ಹಾಗೂ ದೀಪಸ್ಥಂಭ ಪ್ರತಿಷ್ಠಾಪನೆ ಕಾರ್ಯಕ್ರಮವನ್ನು ಭಾನುವಾರ ಮತ್ತು ಸೋಮವಾರ ವಿಜೃಂಭಣೆಯಿಂದ ನೆರವೇರಿತು

ಮಂಡಲಗಿರಿ ಗ್ರಾಮದಲ್ಲಿದ್ದ ದೇವಸ್ಥಾನವನ್ನು ನೂತನವಾಗಿ ನಿರ್ವಹಿಸಿ ನೂತನ ದೇವಸ್ಥಾನದಲ್ಲಿ ಶ್ರೀ ಮಾರುತಿ ಶ್ವರ ಹಾಗೂ ಶ್ರೀ ವಿಷ್ಣು ದೇವರ ಮೂರ್ತಿ ಪೋನಾರ್ ಪ್ರತಿಷ್ಠಾಪನೆ ಹಾಗೂ ದೀಪಸ್ಥಂಭ ಕಾರ್ಯಕ್ರಮವನ್ನು ಆಯೋಜಿಸಿದ್ದು ಭಾನುವಾರ ಸ್ಥಳ ಶುದ್ಧೀಕರಣ, ರಾಪೊಘ್ನ ಪ್ರಕಾರದಲ್ಲಿ ಹವನ ಪೂರ್ಣಾಹುತಿ ,ಜಲಾದಿವಾಸ, ದಾನ್ಯಾದಿವಸ, ಶೈಯಾದಿವಾಸ, ಪೂಜಾ ಕಲಾ ಆವಾಹನೆ ಮತ್ತು ಈ ವಿಧಾನಗಳನ್ನು ನೆರವೇರಿಸಿದರೆ. ಸೋಮವಾರ ಗಣಪತಿ ಹೋಮ, ಮಹಾಸಂಕಲ್ಪ, ಮಾತೃಕ ಪೂಜಾ, ದೇವನಾಂದಿ, ವಾಸ್ತು ಸ್ಥಾಪನೆ, ಹಿಂಡಿಕಾ ಅವನ ಪೂರ್ಣಾಹುತಿ, ದೇವತಾ ಸ್ಥಾಪನೆ, ಲೋಕಾರ್ಪಣೆ ಆಶೀರ್ವಾದ ಹಾಗೂ ಮಹಾಪ್ರಸಾದ ಕಾರ್ಯಕ್ರಮಗಳನ್ನು ನೆರವೇರಿಸಲಾಯಿತು

ಈ ಎಲ್ಲಾ ಕಾರ್ಯಕ್ರಮಗಳು ವಾದ್ಯ ಮೇಳಗಳೊಂದಿಗೆ ಸುಮಂಗಲಿಯರ ಕುಂಭದ ಮೆರವಣಿಗೆಯೊಂದಿಗೆ ವಿಜೃಂಭಣೆಯಿಂದ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ನಂತರ ವಿಶೇಷ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಎಲ್ಲಾ ಸಬ್ಬಕ್ತರಿಗೆ ವಿಶೇಷ ಅನ್ನದಾನ ಮಹಾಪ್ರಸಾದದ ಮಹಾದಾಸೋಹ ಆಯೋಜಿಸಲಾಯಿತು. ಈ ಕಾರ್ಯಕ್ರಮಕ್ಕೆ ಮಾರುತೇಶ್ವರ ಸ್ವಾಮಿಯ ಸಕರ ಸದ್ಭಕ್ತರು ಪಾಲ್ಗೊಂಡು ಧಾರ್ಮಿಕ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿದ ಎಲ್ಲಾ ಸದ್ಭಕ್ತರಿಗೂ ಮಂಡಲಗಿರಿ ಗ್ರಾಮದ ಶ್ರೀ ದೇವಸ್ಥಾನ ಸೇವಾ ಸಮಿತಿಯಿಂದ ಕೃತಜ್ಞತೆಯನ್ನು ಸಲ್ಲಿಸಿದರು ಹಾಗೂ ನೂತನ ದೇವಸ್ಥಾನ ನಿರ್ಮಾಣ ಕಾರ್ಯದಲ್ಲಿ ದಾನ ನೀಡಿದ ಮಹನೀಯರಿಗೆ ಗೌರವಿಸಿ ಸನ್ಮಾನಿಸಲಾಯಿತು.

# ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ರಾಜ್ಯ ಗ್ರಾಮ ಆಡಳಿತ ಅಧಿಕಾರಿಗಳಿಂದ ಪ್ರತಿಭಟನೆ



ಮಲ್ಲಮ್ಮ ನುಡಿ ವಾರ್ತೆ

ಶಹಾಪೂರ:ಫೆ.10: ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಕರ್ನಾಟಕ ರಾಜ್ಯ ಗ್ರಾಮ ಆಡಳಿತ ಸಂಘದ ತಾಲ್ಲೂಕು ಘಟಕದ ವತಿಯಿಂದ ತಾಲೂಕ ದಂಡಾಧಿಕಾರಿಗಳ ಕಚೇರಿ ಎದುರುಗಡೆ ಪ್ರತಿಭಟನೆ ನಡೆಸಿದರು.

ಗ್ರಾಮ ಆಡಳಿತ ಅಧಿಕಾರಿಗಳು ಹಲವು ಮೊಬೈಲ್ ತಂತ್ರಾಂಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ತಾಂತ್ರಿಕ ಹುದ್ದೆಗಳಿಗೆ ನೀಡುವ ವೇತನ ಶ್ರೇಣಿ ನಿಗದಿಪಡಿಸುವುದು. ರೈತರ ಕಾರ್ಯಗಳನ್ನು ನಿರ್ವಹಿಸಲು ಸುಗಮವಾಗುವ ರೀತಿಯಲ್ಲಿ ಗ್ರಾಮ ಮಟ್ಟದಲ್ಲಿ ಕಚೇರಿ, ಖುರ್ಚಿ, ಟೇಬಲ್, ಪ್ರಿಂಟರ್ ಸ್ಕ್ಯಾನರ್‌ಗಳನ್ನು ಒದಗಿಸುವುದು. ಸೇವಾ ವಿಷಯಕ್ಕೆ ಸಂಭಂದಿಸಿದಂತೆ ಅಂತರ್ ಜಿಲ್ಲಾ ವರ್ಗಾವಣೆ, ಹುದ್ದೆ ಮೇಲ್ದರ್ಜೆಗೇರಿಸುವದು, ಸೇವಾ ಭದ್ರತೆ ಒದಗಿಸುವುದು.

ಹಾಗೂ ಇನ್ನಿತರ ವಿವಿಧ ಬೇಡಿಕೆಗಳ ಈಡೇರಿಕೆಗೆ ಕರ್ನಾಟಕ ರಾಜ್ಯ ಗ್ರಾಮ ಆಡಳಿತ ಅಧಿಕಾರಿಗಳ ಸಂಘವು ರಾಜ್ಯವ್ಯಾಪಿ ಶಾಂತಿಯುತ ಪ್ರತಿಭಟನೆ ಮಾಡುತ್ತಿದ್ದು,

ಈ ಸಂದರ್ಭದಲ್ಲಿ ತಾಲ್ಲೂಕು ಗ್ರಾಮ ಆಡಳಿತ ಅಧಿಕಾರಿಗಳ ಸಂಘದ ತಾಲ್ಲೂಕು ಅಧ್ಯಕ್ಷರಾದ ಶ್ರೀ ವೆಂಕಟೇಶ ರಾಠೋಡ್, ತಾಲ್ಲೂಕು ಸಂಘದ ಗೌರವ ಅಧ್ಯಕ್ಷರಾದ ಶ್ರೀ ಗುಂಜಲಪ್ಪ ನಾಯಕ, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಂಕರಗೌಡ ಬಿರಾದಾರ. ಮಂಜುನಾಥ್ ಭಿ ನಾಯಕ್. ಶ್ರೀ ರಮೇಶ ರಾಠೋಡ . ತಾನಾಜಿ. ದೇವರಾಜ ಪಾಟಿಲ್, ರಾಜು ಪೂಜಾರಿ, ಮಲ್ಲಣ್ಣಗೌಡ ಬಿರಾದಾರ, ಸಿದೇಶ್, ವಿಜಯ ಕುಮಾರ್, ಗೋವಿಂದ್, ಮಂಜುನಾಥ್ ಭಜಂತ್ರಿ, ಅಮೀರಬಾಬಾ, ಬಾಬು ನಧಫ್, ಅರುಣ್, ಸುದೇಶ ಕುಮಾರ, ಸಂತೋಷ್ ಗಾಬರಿ, ಮಹಿಳಾ ಗ್ರಾಮ ಆಡಳಿತ ಅಧಿಕಾರಿಗಳು ಕೌಸರ ಬಾನು, ರೇಷ್ಮಾ, ಕವಿತಾ ಹಡಪದ, ಗಾಯತ್ರಿ, ಲಕ್ಷ್ಮಿ ಪತ್ತಾರ, ಕಾಳಮ್ಮ ಸೇರಿದಂತೆ ತಾಲ್ಲೂಕಿನ ಎಲ್ಲಾ ಗ್ರಾಮ ಆಡಳಿತ ಅಧಿಕಾರಿಗಳು ಉಪಸ್ಥಿತರಿದ್ದರು.

# ಮಕ್ಕಳ ಆರೋಗ್ಯಕ್ಕೆ ಹೆಚ್ಚು ಆದ್ಯತೆ ನೀಡಿ:ಡಾ.ಭುವನೇಶ್ವರಿ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಫೆ.10:ಇಂದಿನ ಮಕ್ಕಳು ನಾಳಿನ ಸಮಾಜದ ನಾಗರಿಕರು ಎನ್ನುವ ಮಾತಿಗೆ ಪೂರಕವಾಗಿ ಅತ್ಯುತ್ತಮ ಶಿಕ್ಷಣದ ಜೊತೆಗೆ ಅವರ ಆರೋಗ್ಯಕ್ಕೂ ಆದ್ಯತೆ ನೀಡಬೇಕಾದ ಅಗತ್ಯವಿದೆ ಎಂದು ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ.ಭುವನೇಶ್ವರಿ ಯಳಮಲಿ ಹೇಳಿದ್ದಾರೆ.

ಇಂಡಿಯನ್ ಓವರ್‌ಸಿಸ್ ಬ್ಯಾಂಕ್‌ನ 89 ನೇ ಸಂಸ್ಥಾಪನಾ ದಿನದ ಪ್ರಯುಕ್ತ ಬ್ಯಾಂಕಿನವರು ರವಿವಾರ ಆಯೋಜಿಸಿದ




ಕಾರ್ಯಕ್ರಮದಲ್ಲಿ ಹಾನಗಲ್ಲ ಕುಮಾರೇಶ್ವರ ಆಸ್ಪತ್ರೆಯ ಚಿಕ್ಕಮಕ್ಕಳ ವಿಭಾಗದಲ್ಲಿ ಮಕ್ಕಳಿಗೆ ಹಣ್ಣು ಮತ್ತು ಸಿಹಿ ವಿತರಿಸಿ ಮಾತನಾಡಿದ ಅವರು, ಆಸ್ಪತ್ರೆಯಲ್ಲಿ ಚಿಕ್ಕಮಕ್ಕಳ ವಿಭಾಗ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಮಕ್ಕಳ ಆರೋಗ್ಯಕ್ಕೆ ಆದ್ಯತೆ ನೀಡಲಾಗುತ್ತಿದೆ ಎಂದರು. ಈ ಆಸ್ಪತ್ರೆಯಲ್ಲಿ ಮಕ್ಕಳ ಚಿಕಿತ್ಸೆಗಾಗಿ ಸುಸಜ್ಜಿತ ಎನ್.ಆಯ್.ಸಿ.ಯು, ಪಿ.ಆಯ್.ಸಿ.ಯು, ಕಾಕ್ಲಿಯರ್ ಇಂಪ್ಲ್ಯಾಂಟ್ ಮತ್ತು ಉಚಿತ ಲಸಿಕೆ ಸೌಲಭ್ಯಗಳನ್ನು ಒದಗಿಸಲಾಗಿದೆ. ಚಿಕ್ಕಮಕ್ಕಳ ವಿಭಾಗದಲ್ಲಿ ಸ್ತನ್ಯಪಾನವನ್ನು ಉತ್ತೇಜಿಸಲು ಕೈಗೊಳ್ಳಲಾದ ವಿಶೇಷ ಕಾರ್ಯಕ್ರಮಗಳು ಮತ್ತು ಯೋಜನೆಗಳಿಂದಾಗಿ ಆಸ್ಪತ್ರೆಗೆ ಸ್ತನ್ಯಪಾನಸ್ನೇಹಿ ಆಸ್ಪತ್ರೆ ಎಂದು ನವದೆಹಲಿಯ ರಾಷ್ಟ್ರೀಯ ಮಾನ್ಯತಾ ಕೇಂದ್ರದಿಂದ ಮಾನ್ಯತೆ ದೊರೆತಿದೆ ಎಂದು ಡಾ.ಭುವನೇಶ್ವರಿ ಹೇಳಿದರು.

ಈ ಸಂದರ್ಭ ಇಂಡಿಯನ್ ಓವರ್‌ಸಿಸ್ ಬ್ಯಾಂಕಿನ ಬಾಗಲಕೋಟೆ ಶಾಖೆಯ ಮ್ಯಾನೇಜರ್ ಶ್ರೀಮುರಳಿಧರ, ಎಸ್.ಎನ್.ಎಮ್.ಸಿ ಶಾಖಾ ಮ್ಯಾನೇಜರ್ ಪ್ರವೀಣ ಪಾಠಕ್, ಸಹಾಯಕ ಮ್ಯಾನೇಜರ್ ವಿಪಿನ್ ಜೋಶಿ, ವೈದ್ಯಕೀಯ ಅಧೀಕ್ಷಕ ಡಾ.ಶ್ರೀರಾಮ ಕೋರಾ, ಚಿಕ್ಕಮಕ್ಕಳ ವಿಭಾಗದ ವೈದ್ಯರಾದ ಡಾ.ಅಶೋಕ ಬಡಕಲಿ, ಡಾ.ರಮೇಶ ಪೋಳ, ಡಾ.ವಿನಯ ಕುಮಾರ, ಡಾ.ಕೆಲೂಡೆಪ್ಪ ತಳವಾರ, ಡಾ.ಗಂಗಾಧರ ಮಿರ್ಜಿ, ಡಾ.ಪಲ್ಲವಿ ಚರಂತಿಮಠ ಹಾಗೂ ಸಿಬ್ಬಂದಿ ಮತ್ತು ಮಕ್ಕಳ ಪಾಲಕರು ಉಪಸ್ಥಿತರಿದ್ದರು.

# ಶಹಪುರ್ ನಗರಕ್ಕೆ ಒಳಚರಂಡಿ ವ್ಯವಸ್ಥೆಗೆ 196 ಕೋಟಿ ಟೆಂಡರ್

ಮಲ್ಲಮ್ಮ ನುಡಿ ವಾರ್ತೆ

ಶಹಾಪೂರ:ಫೆ.10: ಬಹು ದಿನಗಳ ಬೇಡಿಕೆಯಾಗಿದ್ದ ಶಹಾಪುರ ನಗರದಲ್ಲಿನ ಒಳಚರಂಡಿ ಕಾಮಗಾರಿಗೆ 196 ಕೋಟಿ ರೂ.ಗಳನ್ನು ಟೆಂಡರ್ ಕರೆಯಲಾಗಿದೆ ಎಂದು ಸಣ್ಣ ಕೈಗಾರಿಕಾ ಸಾರ್ವಜನಿಕ ಉಧ್ಯಮಗಳ ಮಂತ್ರಿಗಳಾದ ಶರಣಬಸ್ಸಪ್ಪಗೌಡ ದರ್ಶನಾಪುರವರು ತಿಳಿಸಿದರು, ಅವರು ಭಿ,ಗುಡಿ ಪ್ರವಾಸಿ ಮಂದಿರದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿ ಈ ವಿಷಯ ಹೇಳಿದರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತದರಲ್ಲಿ ಶಹಾಪುರ ವಿಧಾನಸಭಾ ಮತಕ್ಷೇತ್ರದಲ್ಲಿ ಅಂದಾಜು 400 ಕೋಟಿ ರೂ.ಗಳ ವೆಚ್ಚದಲ್ಲಿ ಕಾಮಗಾಗಿ ಕೈಗೆತ್ತಿಕೊಳ್ಳಲಾಗಿದೆ, 15 ಕೋಟಿ ರೂಗಳಲ್ಲಿ ಸಗರ ಮೈನಾರಟಿ ವಸತಿ ನಿರ್ಮಾಣ, 30 ಕೊಟಿ ರೂ.ಗಳಲ್ಲಿ ಶಿರವಾಳ.ಉಕ್ಕಿನಾಳ ಮುರಾರ್ಜಿ ವಸತಿ ಕಟ್ಟಡ, 14 ಕೊ. ಗಳಲ್ಲಿ ಗೋಗಿ



ಪ್ರಾಥಮಿಕ ಆರೋಗ್ಯ ಕೇಂದ್ರ ಮೇಲ್ದರ್ಜೆಗೆ, ಮೂಡಬುಳ ಹೆಗ್ಗನದೊಡ್ಡಿಗಳಲ್ಲಿ ತಲಾ 5 ಕೊಟಿ ರೂ, ವೆಚ್ಚದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಾಣ, 10 ಕೊಟಿಗಳಲ್ಲಿ ನಗರಸಭೆ ಕಟ್ಟಡ ಕಾಮಗಾರಿಗಾಗಿ 100+110 ಸ್ಥಳವಕಾಶ ನೀಡಲಾಗಿದೆ, ನಗರವ್ಯಾಪ್ತಿಯ ಮುಖ್ಯರಸ್ತೆಯಿಂದ ಒಳರಸ್ತೆಗಳಲ್ಲಿನ ಡ್ರೇನೇಜ್ ಕಾಮಗಾರಿ ಅಲ್ಲದೆ ನಗರದಲ್ಲಿ 1 ಕೊಟಿ 40 ಲಕ್ಷ,ರೂ ವೆಚ್ಚದಲ್ಲಿ ವಿಧ್ಯುತ್ ಕಂಬಗಳ ಮತ್ತು ತಂತಿ ಪ್ರವರ್ತಕಗಳ ಪುನರ ನವಿಕರಣ ಕಾಮಗಾರಿ ಹಾಗೂ ನಗರದಲ್ಲಿರುವ ಬಾಪುಗೌಡ ನಗರದಲ್ಲಿನ ಗಾರ್ಡನ ಅಭಿವೃದಿಗೆ 30 ಲಕ್ಷ, ಮಂಜೂರಿ ಮಾಡಲಾಗಿದೆ ಎಂದು ಸಚಿವ ದರ್ಶನಾಪುರವರು ವಿಸ್ತಾರವಾಗಿ ತಿಳಿಸಿದರು, ತಾಯಿ ಮಕ್ಕಳ ಆಸ್ಪತ್ರೆಯ ಟೆಂಡರ ಪ್ರಕ್ರೀಯ ಮುಗಿದಿದ್ದು ಕಾಮಗಾರಿ ಪ್ರಾರಂಭಗೊಳ್ಳುವ ನೀರಿಕ್ಷೆ ಇದೆ, ಮತ್ತು ಪ್ರಜಾ ಸೌಧ ನಿರ್ಮಾಣಕ್ಕೆ ಕ್ಯಾಬನಟ್ ಅನುಮೋದನೆಗೆ ಪ್ರಸ್ತಾವನೆ ಕಳಿಸಲಾಗಿದೆ ಎಂದು ಸಚಿವ ಶರಣಬಸ್ಸಪ್ಪಗೌಡ ದರ್ಶನಾಪುರ ಹೇಳಿದರು.

# ಮಕ್ಕಳ ಮನೆ ಗ್ರಂಥಾಲಯ ಮಾದರಿಯಾಗಿವೆ : ಜಿಲ್ಲಾಧಿಕಾರಿ ನಲಿನ್ ಅತುಲ್

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :ಫೆ.10: ಪಾಲಕರ ಸಹಕಾರದೊಂದಿಗೆ ಕೊಪ್ಪಳ ಜಿಲ್ಲೆಯ ಮಕ್ಕಳು ತಮ್ಮ ಮನೆಗಳಲ್ಲಿ ನಿರ್ಮಿಸಿಕೊಂಡಿರುವ ಮಕ್ಕಳ ಮೆನೆ ಗ್ರಂಥಾಲಯ' ಮಾದರಿಯಾಗಿವೆ ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿದರು.

ಅವರು ಸೋಮವಾರ ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ಹಾಗೂ ಕಲಿಕೆ ಟಾಟಾ ಟ್ರಸ್ಟ್ ಹಯೋಗದಲ್ಲಿ ಹಮ್ಮಿಕೊಳ್ಳಲಾದ "ಪುಸ್ತಕ ಸಿರಿ ಗೌರವ, ಓದು ಮನೆ ಸಂಭ್ರಮ" ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕರ್ನಾಟಕದಲ್ಲಿ ಹತ್ತು ವರ್ಷದ ಹಿಂದೆ ಶೇ.60 ರಷ್ಟು ಇದ್ದ ಗ್ರಂಥಾಲಯಗಳಲ್ಲಿ ಪುಸ್ತಕ ಓದುವ ಸಂಖ್ಯೆಯು 2018ರಲ್ಲಿ 30 ರಿಂದ 36 ರಷ್ಟು ಇತ್ತು. 2022ಕ್ಕೆ ಶೇ. 57 ರಷ್ಟು ಆಗಿ, ಪ್ರಸ್ತುತ ಆ ಸಂಖ್ಯೆ ಮತ್ತೇ ಶೇ.60ಕ್ಕೆ ಬಂದಿದೆ. 2020–21ರಲ್ಲಿ ಕಲ್ಯಾಣ ಕರ್ನಾಟಕ ಭಾಗದಿಂದ ಆರಂಭವಾದ 'ಓದು ಬೆಳಕು' ಕಾರ್ಯಕ್ರಮದ ಸಂದರ್ಭದಲ್ಲಿ ರಾಜ್ಯದ ಎಲ್ಲಾ ಶಾಲೆಗಳ ಮಕ್ಕಳು ಸೇರಿ ಗ್ರಂಥಾಲಯಗಳಲ್ಲಿ ಸುಮಾರು 10 ಲಕ್ಷ ನೋಂದಣಿಯಾಗಿ–ತ್ತು. ಇದರಲ್ಲಿ 8 ಲಕ್ಷಕ್ಕೂ ಅಧಿಕ ನೋಂದಣಿ ನಮ್ಮ ಕಲ್ಯಾಣ ಕರ್ನಾಟಕದ ಭಾಗದ ಮಕ್ಕಳಿಂದಾಗಿತ್ತು. ಕೊಪ್ಪಳ ಜಿಲ್ಲೆಯಿಂದ ಆರಂಭವಾದ 'ಪುಸ್ತಕ ಜೋಳಿಗೆ' ಕಾರ್ಯಕ್ರಮವು ರಾಜ್ಯಕ್ಕೆ ಮಾದರಿಯಾಯಿತು.



ಈಗ ನಮ್ಮ ಜಿಲ್ಲೆಯ ಸುಮಾರು 300ಕ್ಕೂ ಅಧಿಕ ಮಕ್ಕಳು ತಮ್ಮ–ತಮ್ಮ ಮನೆಯಲ್ಲಿ 100 ಕ್ಕಿಂತ ಹೆಚ್ಚು ಪುಸ್ತಕಗಳನ್ನು ಸಂಗ್ರಹಿಸಿ, ಮನೆಯಲ್ಲಿಯೇ ಗ್ರಂಥಾಲಯ ಮಾಡಿಕೊಂಡಿರುವುದು ಸಂತಸ ತಂದಿದೆ. ಈ ಪ್ರಯತ್ನವು ಭವಿಷ್ಯದಲ್ಲಿ ಆ ಮಕ್ಕಳಿಗೆ ತುಂಬಾ ಅನುಕೂಲವಾಗಲಿದೆ ಎಂದರು.

ರಾಜ್ಯದಲ್ಲಿ 6 ಸಾವಿರಕ್ಕಿಂತ ಹೆಚ್ಚು ಗ್ರಾಮ ಪಂಚಾಯಿತಿಗಳು ಹಾಗೂ 5 ಸಾವಿರಕ್ಕಿಂತ ಗ್ರಾ.ಪಂ ಗ್ರಂಥಾಲಯಗಳಿವೆ. ಆದರೆ, ಶಾಲೆಯ ಓರ್ವ ಮಗು ಮನೆಯಲ್ಲಿಯೇ 100 ಪುಸ್ತಕಗಳನ್ನು ಇಟ್ಟುಕೊಂಡು ಗ್ರಂಥಾಲಯ ಮಾಡಿರುವ ಕೆಲಸ ಬಹುಶಃ ಕೊಪ್ಪಳ ಜಿಲ್ಲೆಯಲ್ಲಿಯೇ ಮಾತ್ರ ಆಗಿದೆ. ಇಂತಹ ಕೆಲಸ ಹೆಚ್ಚಾಗಬೇಕು. ಮಕ್ಕಳು ಶಾಲಾ ಪಠ್ಯ–ಪುಸ್ತಕಗಳ ಜೊತೆಗೆ ರಾಷ್ಟ್ರ, ರಾಜ್ಯಗಳ ಕಲೆ, ಸಾಹಿತ್ಯ, ಸಂಸ್ಕೃತಿ, ಆಚರಣೆ, ಇತಿಹಾಸ ಹಾಗೂ ಇತರೆ ಮಾಹಿತಿ, ಕಥೆಗಳು, ಕಾದಂಬರಿ, ಕಾವ್ಯ ಮತ್ತು ತಮ್ಮ ಜ್ಞಾನವನ್ನು ಹೆಚ್ಚಿಸುವಂತಹ ಒಳ್ಳೆಯ ಪುಸ್ತಕಗಳನ್ನು ಸಂಗ್ರಹಿಸಿ, ಅವುಗಳನ್ನು ಓದುವ ಹವ್ಯಾಸ ರೂಡಿಸಿಕೊಳ್ಳಬೇಕು ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ ಅವರು ಮಾತನಾಡಿ, ಜೀವನದಲ್ಲಿ ಓದು ಮುಖ್ಯವಾಗಿದೆ. ಮಕ್ಕಳು ಪುಸ್ತಕಗಳನ್ನು ಓದುವುದು ಮತ್ತು ಬರೆಯುವಂತಹ ಕೌಶಲ್ಯಗಳನ್ನು ರೂಡಿಸಿಕೊಳ್ಳಬೇಕು. ಜೀವನದಲ್ಲಿನ ಸಮಸ್ಯೆಗಳು ಮತ್ತು ಸವಾಲುಗಳನ್ನು ಪರಿಹರಿಸುವಂತಹ ಶಕ್ತಿ ಪುಸ್ತಕಗಳಲ್ಲಿ ಅಡಗಿದೆ. ಪುಸ್ತಕಗಳನ್ನು ನಿರಂತರವಾಗಿ ಓದುವುದರಿಂದ ಜೀವನದಲ್ಲಿ ಅತ್ಯುತ್ತಮವಾದ ಸ್ಥಾನದ ಉದ್ಯೋಗವನ್ನು ಪಡೆಯಲು ಸಹಾಯಕವಾಗಿದೆ. ಇಂದಿನ ದಿನಮಾನಗಳಲ್ಲಿ ಗಣಿತಕ್ಕೆ ಬಹಳ ಪ್ರಾಮುಖ್ಯತೆಯಿದ್ದು, ಯಾವುದೇ ವ್ಯಾಪಾರ–ವಹಿವಾಟು ಮಾಡಲು ಲೆಕ್ಕ ಅಗತ್ಯವಾಗಿದೆ. ಗಣಿತವು ಮೆದುಳಿನ ಸಾಮರ್ಥ್ಯ ಮತ್ತು ಶಕ್ತಿಯನ್ನು ಹೆಚ್ಚಿಸುತ್ತದೆ. ಮಹಾನ್ ವ್ಯಕ್ತಿಗಳ ಜೀವನ ಚರಿತೆ–ಯ ಪುಸ್ತಕ ಓದುವುದರಿಂದ ಅವರ ಆದರ್ಶಗಳು ನಮಗೆ ತಿಳಿಯುತ್ತವೆ. ಅವುಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ನಾವು ಕೂಡಾ ಜೀವನದಲ್ಲಿ ಯಶಸ್ವಿಯಗುತ್ತೇವೆ ಎಂದರು.

*ಮಕ್ಕಳ ಸ್ವರಚಿತ ಸಣ್ಣ ಕಥೆಗಳ ಪುಸ್ತಕಗಳ ಪ್ರದರ್ಶನ:* ಕಾರ್ಯಕ್ರಮದಲ್ಲಿ ಮಕ್ಕಳ ಸ್ವ–ರಚಿತ ಸಣ್ಣ ಕಥೆಗಳ ಪುಸ್ತಕಗಳ ಪರಿಚಯ ಮತ್ತು ಪ್ರದರ್ಶನ ಮಾಡಲಾಯಿತು. ಓದುಮನೆ ಮಕ್ಕಳಿಗೆ 'ಪುಸಕಸಿರಿ' ಗೌರವವನ್ನು ನೀಡಲಾಯಿತು.

ಕಾರ್ಯಕ್ರಮದಲ್ಲಿ ಕೊಪ್ಪಳ ಯುನಿಸೆಫ್ ವಿಭಾಗದ ಹರೀಶ್ ಜ್ಯೋಗಿ, ಕಲಿಕಾ ಟಾಟಾ ಟಸ್ಟ್ ಕಲ್ಯಾಣ ಕರ್ನಾಟಕ ಭಾಗದ ಯೋಜನಾ ನಿರ್ದೇಶಕ ಗಿರೀಶ್, ಕಲಿಕಾ ಟಾಟಾ ಟಸ್ಟ್ ಕಾರ್ಯಕ್ರಮ ಅಧಿಕಾರಿ ಶಿವಕುಮಾರ ಯಾದವ, ರಾಜ್ಯ ಸಂಪನ್ಮೂಲ ವ್ಯಕ್ತಿಗಳಾದ ರಾಜಲಕ್ಷ್ಮೀ, ಸಂಯೋಜಕ ಕಲ್ಲಪ್ಪ ತಳವಾರ ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳು, ಶಿಕ್ಷಕರು, ಶಾಲಾ ಮಕ್ಕಳು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಗಡಿ ಪ್ರಾಧಿಕಾರದ ಕಾಮಗಾರಿ ಬೇಗ ಪೂರ್ಣಗೊಳಿಸಿ ಹಣ ಬಳಕೆ ಪತ್ರ ಸಲ್ಲಿಸಬೇಕು:ಸೋಮಣ್ಣ ಬೇವಿನಮರದ

ಕಲಬುರಗಿ,ಫೆ.10:ಗಡಿಪ್ರಾಧಿಕಾರದ ಅನುದಾನದಿಂದ ಕಲಬುರಗಿ ಜಿಲ್ಲೆಗೆ ಬಿಡುಗಡೆ ಮಾಡಲಾದ ಅನುದಾನದಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ಕೂಡಲೆ ಪೂರ್ಣಗೊಳಿಸಿ ಹಣ ಬಳಕೆ ಪ್ರಮಾಣ ಪತ್ರ ಸಲ್ಲಿಸಬೇಕೆಂದು ಕರ್ನಾಟಕ ಪ್ರದೇಶ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಸೂಚಿಸಿದರು.

ಸೋಮವಾರ ಇಲ್ಲಿನ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ವಿವಿಧ ಅನುಷ್ಠಾನ ಇಲಾಖೆ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನೆ ನಡೆಸಿ ಮಾತನಾಡಿದ ಅವರು, 2010–11ರಿಂದ ವಿವಿಧ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದ್ದರು, ಹಣ ಬಳಕೆ ಪ್ರಮಾಣ ಪತ್ರ ಬಂದಿಲ್ಲ. ಕೆಲವೆಡೆ ಇನ್ನು ಕಾಮಗಾರಿನೇ ಪ್ರಾರಂಭಿಸಿಲ್ಲ. ಅನುದಾನ ನೀಡಿದರು ಕಾಮಗಾರಿ ಆರಂಭಿಸಿಲ್ಲ ಎಂದಾದ ಮೇಲೆ ಕಾಮಗಾರಿ ಅವಶ್ಯಕತೆ ಇದಿಯೇ ಎಂದು ತಿಳಿಸಬೇಕು. ಇಲ್ಲದಿದ್ದರೆ ಅಗತ್ಯವಿರುವ ಕಡೆ ಈ ಅನುದಾನ ಬಳಸಿಕೊಳ್ಳಲಾಗುವುದು ಎಂದರು.

ರಾಜ್ಯದ ಹಾಗೂ ಹೊರ ರಾಜ್ಯದ ಕನ್ನಡ ಪರ ಸಂಘ–ಸಂಸ್ಥೆಗಳಿಗೆ ಭಾಷಾ ಚಟುವಟಿಕೆಗಳಿಗಾಗಿ ಪ್ರೋತ್ಸಾಹ ನೀಡುವುದು ಹಾಗೂ ಗಡಿ ಭಾಗದ ಕನ್ನಡ ಮಾಧ್ಯಮ ಶಾಲೆಗಳ ಮೂಲಭೂತ ಸೌಕರ್ಯಗಳಾದ ಶಾಲಾ ಕೊಠಡಿ, ಗ್ರಂಥಾಲಯ, ಕ್ರೀಡಾ ಕೊಠಡಿ, ಶಾಲಾ ಶೌಚಾಲಯ, ಶಾಲಾ ಆವರಣ ಗೋಡೆ, ಇತ್ಯಾದಿ ಸೌಲಭ್ಯಗಳನ್ನು ಪ್ರಾಧಿಕಾರದಿಂದ ಒದಗಿಸಲಾಗುತ್ತಿದೆ. 2010–11ರಿಂದ ಇದೂವರೆಗೆ ಜಿಲ್ಲೆಗೆ 22 ಕೋಟಿ ರೂ. ಪ್ರಾಧಿಕಾರದಿಂದ ಬಿಡುಗಡೆ ಮಾಡಿದ್ದು, ಇದರಲ್ಲಿ 7.98 ಕೋಟಿ ರೂ. ಹಣ ಬಳಕೆ ಪ್ರಮಾಣ ಪತ್ರ ಬಂದಿದೆ. ಉಳಿದ ಮೊತ್ತಕ್ಕೆ ಕೂಡಲೆ ಹಣ ಬಳಕೆ ಪ್ರಮಾಣ ಪತ್ರ



ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೋಮಣ್ಣ ಬೇವಿನಮರದ ಸೂಚಿಸಿದರು.

ಕೆಲವೆಡೆ ತಮ್ಮ ಜಮೀನು ಹೊರತುಪಡಿಸಿ ಬೇರೆ ಕಡೆ ಶಾಲಾ ಕಟ್ಟಡ ನಿರ್ಮಾಣ ಮಾಡಲಾಗುತ್ತಿದ್ದೆ, ವಿಜಯಪುರ ಸಭೆಯಲ್ಲಿ ಇಂತಹ ಪ್ರಕರಣಗಳು ಬೆಳಕಿಗೆ ಬಂದಿವೆ. ಹೀಗಾಗಿ ಅನುಷ್ಠಾನ ಅಧಿಕಾರಿಗಳು, ತಹಶೀಲ್ದಾರರು ಕಾಮಗಾರಿ ಸ್ಥಳಕ್ಕೆ ಅಗಾಗ ಭೇಟಿ ನೀಡಿ ಪರಿಶೀಲಿಸಿ ಅನುದಾನ ನೀಡಬೇಕು ಎಂದು ಅನುಷ್ಠಾನ ಅಧಿಕಾರಿಗಳಿಗೆ ಸೋಮಣ್ಣ ಬೇವಿನಮರದ ಅವರು ನಿರ್ದೇಶನ ನೀಡಿದರು.

ಸಾಂಸ್ಕೃತಿಕ ಕಾರ್ಯಕ್ರಮ ಆಯೋಜನೆ ಆಯಾ ವರ್ಷದಲ್ಲಿ ಆಯೋಜಿಸಲು 50 ಸಾವಿರ ರೂ., ಒಂದು ಲಕ್ಷ ರೂ. ಮೊತ್ತ ಅನುದಾನ ಸಂಸ್ಥೆಗಳಿಗೆ ಹಂಚಿಕೆ ಮಾಡಿದ್ದರು, ಇದೂವರೆಗೆ ಸಂಸ್ಥೆಗಳಿಂದ ಅಂದಾಜು ಪಟ್ಟಿ ಬಾರದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಅಧ್ಯಕ್ಷರು, ಆಯಾ ವರ್ಷದಲ್ಲಿ ಆಗಬೇಕಾದ ಕಾರ್ಯಕ್ರಮಗಳು ಈಗ ಮಾಡುವಂತಿಲ್ಲ. ಹೀಗಾಗಿ ಇಂತಹ ಕಾರ್ಯಕ್ರಮಕ್ಕೆ ಈಗ ಅನುದಾನ ಬಿಡುಗಡೆ ಮಾಡಬೇಡಿ ಎಂದು ನಿರ್ದೇಶನ ನೀಡಿದರು.

ಚಿಂಚೋಳಿ ತಾಲೂಕಿನ ಸಾಲೇಬೀರನಹಳ್ಳಿಯಲ್ಲಿ 18 ಲಕ್ಷ ರೂ. ವೆಚ್ಚದಲ್ಲಿ ಶಿಕ್ಷಕರ ವಸತಿ ಗೃಹ ನಿರ್ಮಾಣವಾಗಿದ್ದರು, ಅದರ ಬಳಕೆಯಾಗುತ್ತಿಲ್ಲ ಎಂಬುದು ಸ್ಥಳೀಯರ ದೂರಾಗಿದ್ದು, ಕೂಡಲೆ ಸ್ಥಳಕ್ಕೆ ಭೇಟಿ ನೀಡಿ ವರದಿ ನೀಡುವಂತೆ ಕೆ.ಆರ್.ಐ.ಡಿ.ಎಲ್ ಅಧಿಕಾರಿಗಳಿಗೆ ಸೋಮಣ್ಣ ಬೇವಿನಮರದ ಅವರು ಸೂಚಿಸಿದರು.

ಡಾ.ಜಯದೇವಿ ತಾಯಿ ಲಿಗಾಡೆ ಸಾಂಸ್ಕೃತಿಕ ಭವನ ಪೂರ್ಣಗೊಳಿಸಿ: ನೆರೆಯ ಮಹಾರಾಷ್ಟ್ರದ ಸೋಲಾಪುರ ಜಿಲ್ಲೆಯ ಅಕ್ಕಲಕೋಟೆಯಲ್ಲಿ 2 ಕೋಟಿ ರೂ. ವೆಚ್ಚದಲ್ಲಿ ಡಾ.ಜಯದೇವಿ ತಾಯಿ ಲಿಗಾಡೆ ಅವರ ಹೆಸರಿನಲ್ಲಿ ಸಾಂಸ್ಕೃತಿಕ ಭವನ ನಿರ್ಮಿಸುವುದು ಆಯವ್ಯಯ ಘೋಷಣೆಯ ಕಾರ್ಯಕ್ರಮವಾಗಿರುವ ಹಿನ್ನೆಲೆಯಲ್ಲಿ ಇದೂವರೆಗೆ ಬಿಡುಗಡೆಯಾದ 1.75 ಕೋಟಿ ರೂ. ಹಣಕ್ಕೆ ಕೆಲಸವಾಗಿರುವ ಕುರಿತು ಮಂಗಳವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲಾಗುವುದು. ಕಾಮಗಾರಿ ಪೂರ್ಣಗೊಂಡಲ್ಲಿ ಸಿ.ಎಂ. ಅವರಿಂದ ಸಾಂಸ್ಕೃತಿಕ ಭವನ ಉದ್ಘಾಟಿಸಲಾಗುವುದು. ಇದಕ್ಕೆ ಪೂರ್ವಸಿದ್ಧತೆ ಕೈಗೊಳ್ಳಬೇಕು ಎಂದು ಗಡಿ ಪ್ರಾಧಿಕಾರದ ಅಧ್ಯಕ್ಷರು ತಿಳಿಸಿದರು.

ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಮಾತನಾಡಿ, ಜಿಲ್ಲೆಯಲ್ಲಿ ಗಡಿ ಭಾಗದ ಬಾಕಿ ಕಾಮಗಾರಿ ಸ್ಥಳಕ್ಕೆ ಕೂಡಲೆ ತಹಶೀಲ್ದಾರರು, ಅನುಷ್ಠಾನ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ವರದಿ ನೀಡಬೇಕು. ಕೆಲಸವಾಗಿದ್ದರೆ ಹಣ ಬಳಕೆ ಪತ್ರ ಪಡೆಯಬೇಕು. ಇಲ್ಲದಿದ್ದರೆ ನೋಟಿಸ್ ನೀಡಿ ಹಣ ವಸೂಲಿ ಮಾಡಬೇಕು ಎಂದು ಸೂಚನೆ ನೀಡಿದ ಅವರು, ಸೇಡಂ ಮತ್ತು ಚಿಂಚೋಳಿ ತಾಲೂಕಿನಲ್ಲಿ ರಸ್ತೆ ನಿರ್ಮಾಣ ಕಾಮಗಾರಿಗೂ ಸಾರ್ವಜನಿಕರಿಂದ ದೂರ ಬಂದ ಕಾರಣ ಪಿ.ಆರ್.ಇ.ಡಿ. ಅಧಿಕಾರಿಗಳು ಮತ್ತು ತಹಶೀಲ್ದಾರರು ಜಂಟಿ–ಯಾಗಿ ಭೇಟಿ ನೀಡಿ ವರದಿ ನೀಡುವಂತೆ ಸೂಚಿಸಿದರು.

ಸಭೆಯಲ್ಲಿ ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ ಮತ್ತಿಹಳ್ಳಿ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಲೋಕೋಪಯೋಗಿ ಇಲಾಖೆಯ ಇ.ಇ. ಸುಭಾಷ್, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗದ ಇ.ಇ. ಮಲ್ಲಿಕಾರ್ಜುನ, ಆಳಂದ ತಹಶೀಲ್ದಾರ ಅಣ್ಣಾರಾವ ಪಾಟೀಲ, ಚಿಂಚೋಳಿ ತಹಶೀಲ್ದಾರ ಸುಬ್ಬಣ್ಣ ಜಮಖಂಡಿ, ಸೇಡಂ ತಹಶೀಲ್ದಾರ ಶ್ರೇಯಾಂಕಾ ಧನಶ್ರೀ, ಅಫಜಲಪೂರ ಗ್ರೇಡ್–2 ತಹಶೀಲ್ದಾರ ಶರಣಬಸಪ್ಪ ಹಾಗೂ ಇತರೆ ಅಧಿಕಾರಿಗಳು ಇದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.